
04 ಸೆಪ್ಟೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 175 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಒಲಿಂಪಿಕ್ ಐಕಮತ್ಯ ಕಾರ್ಯಕ್ರಮದಡಿ ಭಾರತ ಒಲಿಂಪಿಕ್ ಸಂಸ್ಥೆಗೆ ನೆರವು ನೀಡುವುದನ್ನು ಪುನರಾರಂಭಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ನಿರ್ಧರಿಸಿದೆ.



ಬೆನ್ನುಹುರಿಯ ಗಾಯದ ಗಂಭೀರತೆಯನ್ನು ನಿರ್ಲಕ್ಷಿಸುವಂತಿಲ್ಲ » 2



ಭಾರತಕ್ಕೆ ಮತ್ತೆ ಕಚ್ಚಾತೈಲ ರಿಯಾಯಿತಿ ಘೋಷಿಸಿದ ರಷ್ಯಾ » 3



ಅಂಜನಾದ್ರಿ ಬೆಟ್ಟ ಅಭಿವೃದ್ಧಿಗೆ ಸಿದ್ದರಾಮಯ್ಯ ಸೂಚನೆ » 4

# ಜಿಎಸ್‌ಟಿ ದರ ಬದಲಾವಣೆಗೆ ಅನುಮೋದನೆ

## ಶೇ.12, ಶೇ.28 ಸ್ಲ್ಯಾಬ್ ಬದಲಿಗೆ ಶೇ.5, ಶೇ.18 ತೆರಿಗೆ | ಜೀವ ರಕ್ಷಕ ಔಷಧಿಗಳು ಅಗ್ಗ | ತಂಬಾಕು, ಪಾನ್ ಮಸಾಲಕ್ಕೆ ಪಾಪದ ಸುಂಕ

• ಪ್ರಜೋದಯ ವರದಿ

**ನವದೆಹಲಿ:** ದೀಪಾವಳಿಗೆ ದೇಶವಾಸಿಗಳಿಗೆ ಉಡುಗೊರೆ ಸಿಗಲಿದೆ ಎಂದು ಪ್ರಧಾನಿ ಮೋದಿ ಅವರು ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಘೋಷಣೆ ಮಾಡಿದ್ದರು. ಅದರಂತೆಯೇ 8 ವರ್ಷಗಳ ಬಳಿಕ ಜಿಎಸ್‌ಟಿ ಸ್ಲ್ಯಾಬ್‌ನಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿಎಸ್‌ಟಿ ಮಂಡಳಿಯ 56ನೇ ಸಭೆಯಲ್ಲಿ ದೇಶದ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲು ಅನುಮೋದನೆ ನೀಡಲಾಗಿದೆ.

ಪ್ರಸ್ತುತ ಇರುವ ಶೇ.12 ಮತ್ತು ಶೇ.28ರ ತೆರಿಗೆ ಸ್ಲ್ಯಾಬ್‌ಗಳನ್ನು ತೆಗೆದುಹಾಕಿ, ಕೇವಲ ಶೇ.5 ಮತ್ತು ಶೇ.18ರ ಎರಡು ಹಂತದ ತೆರಿಗೆ ರಚನೆಯನ್ನು ಜಾರಿಗೆ ತರಲು ಜಿಎಸ್‌ಟಿ ಮಂಡಳಿಯ ಸಚಿವರ ಮಟ್ಟದ ಸಮಿತಿಯ ಪ್ರಸ್ತಾಪಕ್ಕೆ ಒಪ್ಪಿಗೆ ಸಿಕ್ಕಿದೆ ಎನ್ನಲಾಗುತ್ತಿದೆ.

ಬುಧವಾರ ಆರಂಭವಾದ ಎರಡು



ದಿನಗಳ ಸಭೆಯು ಗುರುವಾರ ಮುಕ್ತಾಯಗೊಳ್ಳಲಿದ್ದು, ಈ ಸಭೆಯಲ್ಲಿ ಎಲ್ಲಾ ರಾಜ್ಯಗಳ ಹಣಕಾಸು ಸಚಿವರು ಭಾಗವಹಿಸಿದ್ದಾರೆ. ಕರ್ನಾಟಕದ ಪರವಾಗಿ ಸಚಿವ ಕೃಷ್ಣ ಬೈರೇಗೌಡ ಭಾಗಿಯಾಗಿದ್ದಾರೆ.

### ಸಭೆಯಲ್ಲಿ ಏನೇನು ನಿರ್ಧಾರ

ಪಾದರಕ್ಷೆ ಮತ್ತು ಉಡುಪುಗಳ ಮೇಲಿನ ಜಿಎಸ್‌ಟಿ ಇಳಿಕೆಗೆ ಮುಖ್ಯವಾಗಿ ಅನುಮೋದನೆ ನೀಡಲಾಗಿದೆ. 2,500 ವರೆಗಿನ ಬೆಲೆಯ ಪಾದರಕ್ಷೆಗಳು ಮತ್ತು ಸಿದ್ಧ ಉಡುಪುಗಳ ಮೇಲಿನ ತೆರಿಗೆಯನ್ನು ಶೇ.5ಕ್ಕೆ ಇಳಿಸಲು ಜಿಎಸ್‌ಟಿ ಮಂಡಳಿಯು ಒಪ್ಪಿಗೆ ನೀಡಿದೆ. ಪ್ರಸ್ತುತ, 1,000 ರೂ.ವರೆಗಿನ ವಸ್ತುಗಳಿಗೆ ಶೇ.5 ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ವಸ್ತುಗಳಿಗೆ ಶೇ.12ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ಆರೋಗ್ಯ ಕ್ಷೇತ್ರಕ್ಕೆ ಉತ್ತೇಜನ ನೀಡಲು ಹಿರಿಯ ನಾಗರಿಕರ ಆರೋಗ್ಯ ವಿಮಾ ಪ್ರೀಮಿಯಂ ಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡುವ ಸಾಧ್ಯತೆ ಇದೆ. ಜೀವ ಉಳಿಸುವ ಔಷಧಿಗಳ ಮೇಲಿನ ತೆರಿಗೆ ದರವನ್ನು ಕಡಿತಗೊಳಿಸುವ ಮತ್ತು ಸಾಮಾನ್ಯ ಆರೋಗ್ಯ ವಿಮಾ ಪ್ರೀಮಿಯಂಗಳನ್ನು ಕಡಿಮೆ ತೆರಿಗೆ ಸ್ಲ್ಯಾಬ್‌ಗೆ ತರುವ ಬಗ್ಗೆಯೂ ಮಂಡಳಿ ಚರ್ಚಿಸಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ನೋಂದಣಿ ಪ್ರಕ್ರಿಯೆ ಯನ್ನು ತ್ವರಿತಗೊಳಿಸಲು ನಿರ್ಧರಿಸಲಾಗಿದೆ. ಹಲವು ವಾರಗಳನ್ನು ತೆಗೆದುಕೊಳ್ಳುತ್ತಿದ್ದ ನೋಂದಣಿ ಪ್ರಕ್ರಿಯೆಯನ್ನು ಕೇವಲ ಮೂರು ದಿನಗಳಲ್ಲಿ ಪೂರ್ಣಗೊಳಿಸಲು ಹೊಸ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ.

ಇದಲ್ಲದೆ ಜವಳಿ, ಫಾರ್ಮಾ, ರಾಸಾಯನಿಕ ಮತ್ತು ರಸಗೊಬ್ಬರ ಉದ್ಯಮಗಳಲ್ಲಿನ ವಿಲೋಮ ಸುಂಕ ರಚನೆ ಅಡಿಯಲ್ಲಿ ಬಾಕಿ ಉಳಿದಿರುವ ಮರುಪಾವತಿಗಳನ್ನು ಏಳು ದಿನಗಳೊಳಗೆ ಇತ್ಯರ್ಥ ಪಡಿಸಲು ಮಂಡಳಿ ಒಪ್ಪಿಗೆ ಸೂಚಿಸಿದೆ.

ಈ ತೆರಿಗೆ ಬದಲಾವಣೆಗಳಿಂದ ಉಂಟಾಗಬಹುದಾದ ಆದಾಯ ನಷ್ಟವನ್ನು ಕೇಂದ್ರ ಸರ್ಕಾರ ಭರಿಸಬೇಕು ಎಂದು ಕರ್ನಾಟಕ, ಹಿಮಾಚಲ ಪ್ರದೇಶ, ಜಾರ್ಖಂಡ್, ಕೇರಳ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳ ಸೇರಿ ಎಂಟು ರಾಜ್ಯಗಳು ಪರಿಹಾರಕ್ಕಾಗಿ ಬೇಡಿಕೆ ಇಟ್ಟಿವೆ ಇದರ ಬಗ್ಗೆ ಮಂಡಳಿ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮುಂಬರುವ ಹಬ್ಬದ ಋತುವಿನ ಮುನ್ನ, ಕೆಲವೇ ವಾರಗಳಲ್ಲಿ ಈ ಹೊಸ ತೆರಿಗೆ ದರಗಳು ಜಾರಿಗೆ ಬರುವ ನಿರೀಕ್ಷೆ ಇದೆ.


### ಯಾವುದು ಅಗ್ಗ

- ಜೀವ ರಕ್ಷಕ ಔಷಧಿಗಳು ಅಗ್ಗ
- ಕ್ಯಾನ್ಸರ್ ಔಷಧಿಗೆ ಜಿಎಸ್‌ಟಿಯೇ ಇಲ್ಲ
- ಅಗತ್ಯ ಔಷಧಿಗಳು ಶೇ.12ರಿಂದ ಶೇ.5ಕ್ಕೆ ಇಳಿಕೆ
- ವೈಯಕ್ತಿಕ ಹೆಲ್ತ್ ಲೈಫ್ ಇನ್ಶುರೆನ್ಸ್‌ಗೆ ಜಿಎಸ್‌ಟಿ ಇಲ್ಲ
- ದಿನ ಬಳಕೆ ವಸ್ತುಗಳು ಶೇ.12ರಿಂದ ಶೇ.5ಕ್ಕೆ ಇಳಿಕೆ
- ಆಟೋಮೊಬೈಲ್ ಶೇ.28ರಿಂದ ಶೇ.18ಕ್ಕೆ ಇಳಿಕೆ
- ವಸತಿ ಆತಿಥ್ಯ ಮನರಂಜನೆ ಶೇ.12ರಿಂದ ಶೇ.5ಕ್ಕೆ ಇಳಿಕೆ
- ಕೃಷಿ ರಸಗೊಬ್ಬರ : ಶೇ.18ರಿಂದ ಶೇ.5ಕ್ಕೆ ಇಳಿಕೆ
- ಜವಳಿ ಉತ್ಪನ್ನಗಳಿಗೆ ಶೇ.12ರಿಂದ ಶೇ.5ಕ್ಕೆ ಇಳಿಕೆ

### ಯಾವುದು ದುಬಾರಿ

- ತಂಬಾಕು, ಪಾನ್ ಮಸಾಲ ( ಪಾಪದ ಸುಂಕ)
- ಐಷಾರಾಮಿ ವಾಹನಗಳು
- ಎಲೆಕ್ಟ್ರಿಕ್ ವಾಹನಗಳು ಶೇ.5ರಿಂದ ಶೇ.18ಕ್ಕೆ ಏರಿಕೆ
- 40 ಲಕ್ಷ ರೂ. ಮೀರಿದ ಐಷಾರಾಮಿ ಇವಿಗಳು ಶೇ.40

# ಬಿಸ್ಲೆ ಘಾಟ್‌ನಲ್ಲಿ ಮಣ್ಣು ಕುಸಿತ: ಸಂಚಾರ ವ್ಯತ್ಯಯ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವಿವಿಧೆಡೆ ಬುಧವಾರ ಸುರಿದ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದ್ದು, ಬಿಸ್ಲೆ ಹಾಗು ಸುಬ್ರಹ್ಮಣ್ಯ ನಡುವಿನ ಅಡ್ಡಹೊಳೆ, ತೂಗು ಸೇತುವೆ ಸಮೀಪ ಮಣ್ಣು ಕುಸಿದು ಕೆಲ ಕಾಲ ಸಂಚಾರದಲ್ಲಿ ವ್ಯತ್ಯಯವಾಯಿತು.

ಬೆಳಿಗ್ಗೆ 7 ಗಂಟೆಗೆ ರಸ್ತೆಗೆ ಮಣ್ಣು ಬಿದ್ದಿದ್ದರಿಂದ ವಾಹನಗಳ ಸಂಚಾರದಲ್ಲಿ ವ್ಯತ್ಯಯವಾಯಿತು. ಸವಾರರು ಪ್ರಾಣ ಭಯದಲ್ಲೇ ಅಲ್ಪ ಜಾಗದಲ್ಲೇ ಸಂಚರಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಲೋಕೋಪಯೋಗಿ ಇಲಾಖೆ ಅಧಿಕಾರಿ, ಸಿಬ್ಬಂದಿ ಜೆಸಿಬಿ ಮೂಲಕ ಮಣ್ಣು ತೆರವುಗೊಳಿಸಿದರು. ಪ್ರತಿವರ್ಷ ಮಳೆ ಸಮಯದಲ್ಲಿ ಬಿಸ್ಲೆ ಘಾಟ್‌ನಲ್ಲಿ ಭೂಕುಸಿತ ಸಾಮಾನ್ಯವಾಗಿದ್ದು, ರಸ್ತೆ ಸಂಚಾರ ಅಡಚಣೆಗೊಳಗಾಗುತ್ತದೆ. ಇತ್ತೀಚೆಗೆ ಈ ಭಾಗದಲ್ಲಿ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ರಸ್ತೆ ಸಂಚಾರ ಅಡಚಣೆಗೊಳ್ಳದಂತೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

### ಮಾಜಿ ಸಚಿವ ವಿನಯ ಕುಮಾರ್ ಸೊರಕೆ | ಶೀಘ್ರ ಹುಡಾ ಅಧ್ಯಕ್ಷರ ನೇಮಕ

# ಜೆಡಿಎಸ್-ಬಿಜೆಪಿ ಮೈತ್ರಿ: ಕಾಂಗ್ರೆಸ್ ಬಲಗೊಳಿಸಲು ಸಕಾಲ

ಪ್ರಜೋದಯ ವರದಿ

**ಹಾಸನ:** ಜಾತ್ಯಾತೀತ ಪಕ್ಷ ಎಂದು ಬಿಂಬಿಸಿಕೊಳ್ಳುತ್ತಿದ್ದ ಜೆಡಿಎಸ್‌ನವರು ಬಿಜೆಪಿಯೊಂದಿಗೆ ಸೇರಿಕೊಂಡಿರುವುದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಭದ್ರಗೊಳಿಸಲು ಸೂಕ್ತಕಾಲ ಬಂದಿದೆ ಎಂದು ಮಾಜಿ ಸಚಿವ, ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯ ಕುಮಾರ್ ಸೊರಕೆ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕಾಂಗ್ರೆಸ್ ಮುಖಂಡರಲ್ಲಿ ಭಿನ್ನ ಅಭಿಪ್ರಾಯಗಳು ಇರಬಹುದೇ ವಿನಃ ಪಕ್ಷ ಸಂಘಟನೆಗೆ ಯಾವುದೇ ಸಮಸ್ಯೆಗಳಿಲ್ಲ. ಯಾವ ಕಾರಣಕ್ಕೆ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷರನ್ನು ನೇಮಕ ಮಾಡಿಲ್ಲವೆಂಬುದು ತಿಳಿದಿಲ್ಲ. ಶೀಘ್ರದಲ್ಲೇ ಎಲ್ಲಾ ಗೊಂದಲ ಸರಿಪಡಿಸಿ ಅಧ್ಯಕ್ಷರ ನೇಮಕವಾಗಲಿದೆ ಎಂದು ತಿಳಿಸಿದರು.




ಹೊಸದಾಗಿ ಬಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕ್ರಿಯಾಶೀಲರಾಗಿದ್ದಾರೆ. ಪಕ್ಷ ಸಂಘಟನೆ, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಿದ್ದಾರೆ. ಹಿಂದೆ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರ ಶ್ರಮದಿಂದಲೂ ಲೋಕಸಭೆ ಚುನಾವಣೆ ಗೆಲ್ಲಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯಕಲ್ಲಿ ಪಕ್ಷವನ್ನು ಬಲಪಡಿಸಲು ಪ್ರಚಾರ ಸಮಿತಿ ಹೆಚ್ಚು ಕಾರ್ಯ ನಿರ್ವಹಿಸಲಿದೆ ಎಂದರು.

ಕಾಂಗ್ರೆಸ್ ಪ್ರಚಾರ ಸಮಿತಿ ಈ ಹಿಂದೆ ಚುನಾವಣಾ ಪ್ರಚಾರಕ್ಕೆ ಮಾತ್ರ ಸೀಮಿತವಾಗಿತ್ತು. ಪ್ರಸ್ತುತ ವರ್ಷದ 365 ದಿನಗಳ ಕಾಲವೂ ಕಾರ್ಯ ನಿರ್ವಹಿಸುವಂತೆ ರೂಪಿಸಲಾಗಿದೆ. ಪ್ರಚಾರ ಸಮಿತಿಯ ಪದಾಧಿಕಾರಿಗಳನ್ನು ಎಐಸಿಸಿ ಅನುಮೋದಿಸಿದ ನಂತರ ನೇಮಕ ಮಾಡಲಾಗುವುದು. ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ರಚಿಸುವುದು ಮಾತ್ರವಲ್ಲದೇ ಬೂತ್ ಮಟ್ಟಕ್ಕೂ ವಿಸ್ತರಿಸಲಾಗುವುದು. ಪ್ರತಿ ಬೂತ್‌ಗೆ ತಲಾ ಇಬ್ಬರಂತೆ ಒಂದು ಲಕ್ಷಕ್ಕೂ ಹೆಚ್ಚು ಡಿಜಿಟಲ್ ಯುತ್‌ಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದೆಂದು ಹೇಳಿದರು.

ನಮ್ಮ ಪಕ್ಷದ ಸಿದ್ಧಾಂತಗಳನ್ನು ಕಾರ್ಯಕರ್ತರಿಗೆ ತಿಳಿಸಲು ಕಾರ್ಯಾ

» ನಾಲ್ಕನೇ ಪುಟದಲ್ಲಿ

# ವಿಜೃಂಭಣೆಯ ಪಾಂಚಜನ್ಯ ಗಣಪತಿ ವಿಸರ್ಜನೆ

## ಶೋಭಾಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗಿ | ರಾರಾಜಿಸಿದ ಕೇಸರಿ ಬಾವುಟ | ಗಮನ ಸೆಳೆದ ಸ್ತಬ್ಧಚಿತ್ರಗಳು

• ಪ್ರಜೋದಯ ವರದಿ

**ಹಾಸನ:** ಆರ್‌ಎಸ್‌ಎಸ್ ಪಾಂಚಜನ್ಯ ಹಿಂದೂ ಗಣಪತಿ ವಿಸರ್ಜನಾ ಮಹೋತ್ಸವದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಬೃಹತ್ ಶೋಭಾಯಾತ್ರೆ ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿ ಕುಣಿದು ಕುಪ್ಪಳಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಿದ್ದ ಪಾಂಚಜನ್ಯ ಗಣಪತಿ ಮೂರ್ತಿಯನ್ನು ವಿವಿಧ ಸ್ತಬ್ಧಚಿತ್ರಗಳೊಂದಿಗೆ ನಗರದ ಪ್ರಮುಖ ರಸ್ತೆಯಲ್ಲಿ ಮಧ್ಯಾಹ್ನದಿಂದ ರಾತ್ರಿವರೆಗೂ ಭವ್ಯ ಮೆರವಣಿಗೆ ನಡೆಸಿ ನಗರದ ದೇವಿಗೆರೆಯಲ್ಲಿ ವಿರ್ಜಿಸಲಾಯಿತು.

ಶೋಭಯಾತ್ರೆ ಮೆರವಣಿಗೆಗೆ ಶಾಸಕ ಹೆಚ್.ಪಿ.ಸ್ವರೂಪ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ, ಶಾಸಕರಾದ





ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್ ಅವರು ಚಾಲನೆ ನೀಡಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪಾಂಚಜನ್ಯ ಗಣೇಶ ಸಮಿತಿ ವೇಣುಗೋಪಾಲ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ನಗರಸಭಾ ಸದಸ್ಯರು ಸೇರಿ ನೂರಾರು ಹಿಂದೂಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ವಿವಿಧ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.

ಮೆರವಣಿಗೆ ಕನ್ನಡ ಸಾಹಿತ್ಯ ಪರಿಷತ್ ಭವನದದಿಂದ ಆರಂಭವಾಗಿ ಬಸವೇಶ್ವರ ದೇವಸ್ಥಾನ, ಹೊಸಲೈನ್ ರಸ್ತೆ, ಸುಭಾಷ್ ಚೌಕ ಹೇಮಾವತಿ ಪ್ರತಿಮೆ ಮೂಲಕ ಸಾಗಿ ನಂತರ ರಾತ್ರಿ ದೇವಿಗೆರೆಗೆ ತಲುಪಿತು. ಶೋಭಯಾತ್ರೆಯಲ್ಲಿ ಶ್ರೀಕೃಷ್ಣ, ಕೆಂಪೇಗೌಡ, ಆಪರೇಷನ್ ಸಿಂಧೂರ್, ಅಯೋಧ್ಯರಾಮ, ಡಾ. ಬಿ.ಆರ್.ಅಂಬೇಡ್ಕರ್, ಕಾಮಧೇನು ಸ್ತಬ್ಧಚಿತ್ರಗಳು ಗಮನ ಸೆಳೆದವು. ಅದರ ಜೊತೆಗೆ ಕೇಸರಿ ಬಾವುಟ ರಾರಾಜಿಸಿದವು. ನಡುವೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ, ಪಾನಕ ವಿತರಣೆ ವ್ಯವಸ್ಥೆ ಮಾಡಲಾಯಿತು.

ಡಿಜೆ ಸದ್ದಿಗೆ ಯುವಕ- ಯುವತಿಯರು ಮಳೆಯ ನಡುವೆಯೇ ರಸ್ತೆಯುದ್ದಕ್ಕೂ ಕುಣಿದು ಕುಪ್ಪಳಿಸಿ ದರು. ಮಳೆ ಸುರಿದರೂ ಮೆರವಣಿ ಗೆಯಲ್ಲಿ ಉತ್ಸಾಹ ತಣಿಯಲಿಲ್ಲ. ನೆನೆಯುತ್ತಲೇ ಯುವಕ- ಯುವತಿಯರು, ಮಕ್ಕಳು ಡಿಜೆ ಹಾಡಿಗೆ ಹೆಜ್ಜೆ ಹಾಕಿದರು. ಭಾಗಿಯಾಗಿದ್ದ

» ನಾಲ್ಕನೇ ಪುಟದಲ್ಲಿ

### ನಗರದಲ್ಲಿ ಟ್ರಾಫಿಕ್ ಸಮಸ್ಯೆ

ಮಧ್ಯಾಹ್ನದಿಂದಲೇ ಶೋಭಾಯಾತ್ರೆ ಆರಂಭವಾಗಿದ್ದರಿಂದ ಮೆರವಣಿಗೆ ಸಾಗುವ ಮಾರ್ಗ ಹಾಗು ಅಕ್ಕಪಕ್ಕದ ರಸ್ತೆಗಳಲ್ಲಿ ವಾಹನ ಸಂಚಾರ ನಿಷೇಧಿಸಿದ್ದರಿಂದ ನಗರದಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಯಿತು. ನಗರ ಸಾರಿಗೆ ಬಸ್ ಸಂಚಾರ ಸೇರಿ ಇತರೆ ವಾಹನಗಳ ಸಂಚಾರಕ್ಕಾಗಿ ಬದಲಿ ಮಾರ್ಗಗಳನ್ನು ಕಲ್ಪಿಸಿದ್ದರೂ ವಾಹನ ದಟ್ಟಣೆ ನಿವಾರಣೆ ಮಾಡಲು ಪೊಲೀಸರು ಹರಸಾಹಸ ಪಡುವಂತಾಯಿತು.

### ವಿಶ್ವವಿಖ್ಯಾತ ದಸರಾ ಉದ್ಘಾಟನೆಗೆ ಆಯ್ಕೆ: ಮೈಸೂರು ಜಿಲ್ಲಾಡಳಿತದಿಂದ ಸನ್ಮಾನ

# ಬಾನು ಮುಷ್ತಾಕ್‌ಗೆ ಸರ್ಕಾರದಿಂದ ಅಧಿಕೃತ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಆಯ್ಕೆಯಾಗಿರುವ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಮೈಸೂರು ಜಿಲ್ಲಾಡಳಿತದಿಂದ ಬುಧವಾರ ಅಧಿಕೃತ ಆಹ್ವಾನ ನೀಡಿತು.

ನಗರದ ಅಮೀರ್ ಮೊಹಲ್ಲಾದಲ್ಲಿರುವ ಬಾನು ಮುಷ್ತಾಕ್ ಅವರ ನಿವಾಸಕ್ಕೆ ಮೈಸೂರಿನಿಂದ ಆಗಮಿಸಿದ ದಸರಾ ಆಚರಣೆ ವಿಶೇಷಾಧಿಕಾರಿ ಹಾಗು ಮೈಸೂರು ಜಿಲ್ಲಾಧಿಕಾರಿ ಡಾ. ಲಕ್ಷ್ಮಿಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಶಿವರಾಜ್, ಚಾಮುಂಡಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ, ಜಿಲ್ಲಾ ಪಂಚಾಯಿತಿ ಯುಕೇಶ್



ಕುಮಾರ್, ಮೈಸೂರು ಪಾಲಿಕೆ ಆಯುಕ್ತ ತನ್ವೀರ್ ಆಸಿಫ್ ಮೊದಲಾದ ಅಧಿಕಾರಿಗಳ ತಂಡ ಬಾನು ಮುಷ್ತಾಕ್ ಅವರನ್ನು ಮೈಸೂರು ಪೇಟ ತೊಡಿಸಿ ಸನ್ಮಾನಿಸಿ, ಆಹ್ವಾನ ಪತ್ರಿಕೆ ನೀಡಿ ದಸರಾ ಮಹೋತ್ಸವ ಉದ್ಘಾಟನೆಗೆ ಆಗಮಿಸುವಂತೆ ಕೋರಲಾಯಿತು.

ಈ ಆಹ್ವಾನವನ್ನು ಬಾನು ಮುಷ್ತಾಕ್ ಅವರು ಸಂತೋಷದಿಂದ ಒಪ್ಪಿಕೊಂಡರು. ಈ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರ ಪತಿ ಹಾಗೂ ಕುಟುಂಬ ಸದಸ್ಯರು ಹಾಜರಿದ್ದರು. ಕಡೆಯಲ್ಲಿ ದಸರಾ ಉದ್ಘಾಟನೆಗೆ ತಮ್ಮನ್ನು ಆಹ್ವಾನಿಸಲು ಬಂದಿದ್ದ ಅಧಿಕಾರಿಗಳಿಗೆ ತಮಗೆ ಬೂಕರ್ ಪ್ರಶಸ್ತಿ ತಂದುಕೊಟ್ಟ ಎದೆಯ ಹಣತೆ ಪುಸ್ತಕಕ್ಕೆ ಶುಭ ನುಡಿ ಬರೆದು ಬಾನು ಮುಷ್ತಾಕ್ ಅವರು ನೀಡಿದರು.

ಈ ವೇಳೆ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರು ಮಾತನಾಡಿ,

» ನಾಲ್ಕನೇ ಪುಟದಲ್ಲಿ

## ಸೆ.6ರಂದು ಜನಸ್ಪಂದನಾ ಸಭೆ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸೆ.6ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜನಸ್ಪಂದನಾ ಮತ್ತು ಸಾರ್ವಜನಿಕರ ಕುಂದುಕೊರತೆ ಸಭೆ ನಡೆಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ರಾದ ಬಳಿಕ ಇದೇ ಮೊದಲ ಬಾರಿಗೆ ಸಾರ್ವ ಜನಿಕರ ಕುಂದುಕೊರತೆ ಸಭೆ ನಡೆಸಲು ಸಚಿವರು ಮುಂದಾಗಿದ್ದಾರೆ. ಆ.15 ರಂದು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿ ಬಳಿಕ, ಹಾಸನಾಂಬ ಉತ್ಸವದ ಪೂರ್ವಭಾಗಿ ಸಭೆ ನಡೆಸಿದ್ದರು.

# ಅರಸೀಕೆರೆ-ಹಾಸನ ದ್ವಿಪಥ ರಸ್ತೆಯಾಗಿಸಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಸರಣಿ ಅಪಘಾತ, ವಾಹನ ದಟ್ಟಣೆಯಿಂದ ಅರಸೀಕೆರೆ-ಹಾಸನ ರಾಜ್ಯ ಹೆದ್ದಾರಿ ಕಿಷ್ಕಿಂಧೆಯಂತಾಗಿ ಸಂಚಾರ ಕಷ್ಟಕರವಾಗಿದ್ದು ದ್ವಿಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸಬೇಕೆಂಬ ಆಗ್ರಹ ಕೇಳಿಬಂದಿದೆ.

ತಾಲ್ಲೂಕು ಕೇಂದ್ರದಿಂದ ಹಾಸನಕ್ಕೆ ನಿತ್ಯ ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಬೆಲವತ್ತಳ್ಳಿ ಅರಣ್ಯ ಪ್ರದೇಶ ಒಳಗೊಂಡಂತೆ ವಿವಿಧೆಡೆ ಸರಣಿ ಅಪಘಾತಗಳು ಸಂಭವಿಸಿ ಪ್ರಾಣಾಪಾಯ ಪ್ರಕರಣ ವರದಿಯಾಗುತ್ತಲೇ ಇದೆ. ಬೈಕ್, ಕಾರು, ಕೆಎಸ್‌ಆರ್‌ಟಿಸಿ ಬಸ್‌ಗಳು ಅಪಘಾತಕ್ಕೀಡಾಗಿ ಹಲವರು ಮೃತಪಟ್ಟಿದ್ದರೆ, ಮತ್ತೆ ಕೆಲವರು ಕೈ, ಕಾಲು ಮುರಿದುಕೊಂಡು ಅಂಗವೈಕಲ್ಯಕ್ಕೆ ತುತ್ತಾಗಿದ್ದಾರೆ. ವೇಗದ ಚಾಲನೆಯಿಂದಲೂ ಅವಘಡಗಳು ಸಂಭವಿಸುತ್ತಿವೆ. ಹೀಗಾಗಿ ಈ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

### ಡಿಸಿಎಂ ಗಮನಕ್ಕೆ ವಿಚಾರ

ರಸ್ತೆ ವಿಸ್ತರಣೆಯಾದರೆ ಸುಕ್ಷೇತ್ರ ಹಾರನಹಳ್ಳಿ ಕೋಡಿಮಠಕ್ಕೆ ಬರುವ ಭಕ್ತರಿಗೂ ಅನುಕೂಲವಾಗಲಿದೆ. ಕಳೆದ ತಿಂಗಳು ಮಠಕ್ಕೆ ಭೇಟಿ ನೀಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಈ ವಿಚಾರವನ್ನು ಕಾಂಗ್ರೆಸ್ ಕಾರ್ಯಕರ್ತರು ತಂದಿದ್ದಾರೆ ಎನ್ನಲಾಗಿದೆ. ಐತಿಹಾಸಿಕ ಬೇಲೂರು, ಹಳೇಬೀಡು ಪ್ರವಾಸಿ ಕೇಂದ್ರಕ್ಕೆ ಹಾರನಹಳ್ಳಿ, ಜಾವಗಲ್ ಮಾರ್ಗವಾಗಿ ತಲುಪಲು ಹತ್ತಿರದ ದಾರಿ ಇದಾಗಿರುವುದರಿಂದ ಪ್ರವಾಸೋದ್ಯಮ ಉದ್ದೇಶದಿಂದಲೂ



ರಸ್ತೆ ದ್ವಿಪಥವಾದರೆ ಅನುಕೂಲವಾಗುತ್ತದೆ.

ರಸ್ತೆ ವಿಸ್ತರಣೆಯಿಂದ ವಾಹನ ದಟ್ಟಣೆ ಕಡಿಮೆಯಾಗುವುದರ ಜೊತೆಗೆ ಅಪಘಾತಗಳು, ಸರಣಿ ಸಾವಿನ ಸಂಖ್ಯೆ ತಗ್ಗಲಿದೆ. ಸುಗಮ ಸಂಚಾರಕ್ಕೆ ಅವಕಾಶ ದೊರೆಯಲಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗು ಜನಪ್ರತಿನಿಧಿಗಳು

» ನಾಲ್ಕನೇ ಪುಟದಲ್ಲಿ

## ದಸರಾ ಉದ್ಘಾಟನೆಯಿಂದ ಹಿಂದೆ ಸರಿಯಿರಿ: ಮನವಿ

• ಪ್ರಜೋದಯ ವರದಿ



**ಹಾಸನ:** ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರು ಮೈಸೂರು ದಸರಾ ಉದ್ಘಾಟನೆಯಿಂದ ಹಿಂದೆ ಸರಿಯಬೇಕೆಂದು ಆಗ್ರಹಿಸಿ ರಾಷ್ಟ್ರರಕ್ಷಣಾ ಸೇನೆ ಪದಾಧಿಕಾರಿಗಳು ಬುಧವಾರ ಮನವಿ ಸಲ್ಲಿಸಿದರು.

ಬಾನು ಮುಷ್ತಾಕ್ ಅವರ ಮನೆಗೆ ಭೇಟಿ ನೀಡಿದ ಅವರು, ಭುವನೇಶ್ವರಿ ಕುರಿತು ನೀವು ಮಾಡಿರುವ ಮಾತುಗಳು ಆಕ್ಷೇಪಾರ್ಹವಾಗಿವೆ. ದಸರಾ ನಾಡ ಹಬ್ಬವಾದರೂ ಹಿಂದೂ ಸಂಪ್ರದಾಯದ ಪ್ರತೀಕ. ಮೂರ್ತಿ ಪೂಜೆ ನಮ್ಮ ಸಂಸ್ಕೃತಿ. ಕುಂಕುಮ ಇಡುವುದು, ಬಳೆ ತೊಡುವುದು ನಮ್ಮ ಸಂಪ್ರದಾಯ. ಈ ಹಿಂದೆ ನೀವು ಭುವನೇಶ್ವರಿಯನ್ನು ಕಟ್ಟಿ ಹಾಕಲಾಗಿದೆ ಎಂದಿದ್ದೀರಿ. ನಮ್ಮ ಪದ್ಧತಿ ಒಪ್ಪದ ನೀವು ದಸರಾ ಉದ್ಘಾಟನೆಯಿಂದ ಹಿಂದೆ ಸರಿಯಿರಿಯೆಂದು ಮನವಿ ಮಾಡಿದರು. ಗಡಿನಾಡು ಬಳ್ಳಾರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲು ನಮ್ಮ ಅಭ್ಯಂತರವಿಲ್ಲ. ಆದರೆ ದಸರಾ ಉದ್ಘಾಟನೆ ಮಾಡಬಾರದು. ಅದರಿಂದ ಕೋಟ್ಯಾಂತರ ಹಿಂದೂಗಳ ಭಾವನೆಗೆ ಧಕ್ಕೆಯಾಗುತ್ತದೆ. ಸರ್ಕಾರದ ಆಹ್ವಾನ ತಿರಸ್ಕರಿಸಿ ದೊಡ್ಡತನ ಮೆರೆಯಬೇಕೆಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಸಾಹಿತಿ ಬಾನು ಮುಷ್ತಾಕ್ ಅವರು ಮಾತನಾಡಿ, ಸಂಪ್ರದಾಯಕ್ಕೆ ಲೋಪ ಬಾರದಂತೆ ದಸರಾ ಹಬ್ಬ ಉದ್ಘಾಟನೆ ಮಾಡುತ್ತೇನೆಂದರು. ರಾಷ್ಟ್ರ ರಕ್ಷಣಾ ಸೇನೆ ರಾಜ್ಯ ಸಂಚಾಲಕ ಸುರೇಶ್‌ಗೌಡ, ಜಿಲ್ಲಾ ಸಂಚಾಲಕರಾದ ಧರ್ಮ ನಾಯಕ್, ರಾಜೇಶ್ ಕೆಂಚನಹಳ್ಳಿ ಇದ್ದರು.

## ಬೆಳೆ ಹಾನಿ: ಹೆಕ್ಟೇರ್‌ಗೆ 25 ಸಾವಿರ ರೂ. ಪರಿಹಾರಕ್ಕೆ ಆಗ್ರಹ

• ಪ್ರಜೋದಯ ವರದಿ

**ಬೆಂಗಳೂರು:** ಅತೀವ ಮಳೆಯಿಂದ ಮಲೆನಾಡು ಮತ್ತು ಕಲ್ಯಾಣ ಕರ್ನಾಟಕದ ಹಲವೆಡೆ ಬೆಳೆ ನಾಶವಾಗಿದೆ. ಸರ್ಕಾರವು ಹೆಕ್ಟೇರ್‌ಗೆ 25 ರಿಂದ 30 ಸಾವಿರ ರೂ. ಪರಿಹಾರ ಘೋಷಿಸಬೇಕೆಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಒತ್ತಾಯಿಸಿದ್ದಾರೆ.

ಬುಧವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರಕ್ಕೆ ರೈತರು ಮತ್ತು ಜನರ ಬಗ್ಗೆ ಕಾಳಜಿಯೇ ಇಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರು ತಾವು ಓಡಾಡಲು 80 ಕೋಟಿಯ ಹೆಲಿಕಾಪ್ಟರ್ ಹಾಗು 150 ಕೋಟಿ ರೂ. ವೆಚ್ಚದಲ್ಲಿ ವಿಮಾನ ಖರೀದಿಸಲು ಮುಂದಾಗಿದ್ದಾರೆ. ಅವರಿಗೆ ಮಳೆ ಸಂತ್ರಸ್ತರ ಬಗ್ಗೆ ಮಾತನಾಡಲು ಸಮಯವಿಲ್ಲವೆಂದರು. ಈ ಬಗ್ಗೆ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ನೆರೆ ಪೀಡಿತ ಪ್ರದೇಶಗಳಿಗೆ ಇದೇ 9 ರಿಂದ ಪ್ರವಾಸ ಕೈಗೊಳ್ಳಲಿದ್ದೇವೆ. ನಷ್ಟಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ, ಸರ್ಕಾರಕ್ಕೆ ಸಲ್ಲಿಸುತ್ತೇವೆಂದರು.

# ವಿಐಎಸ್‌ಎಲ್ ಪುನರುಜ್ಜೀವನಕ್ಕೆ ಡಿಪಿಆರ್: ಹೆಚ್‌ಡಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಭದ್ರಾವತಿಯ ಸರ್ ಎಂ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಪುನರುಜ್ಜೀವನಗೊಳಿಸಲು ಕೇಂದ್ರ ಉಕ್ಕು ಸಚಿವಾಲಯವು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದೆ.

ಕಾಲಮಿತಿಯೊಳಗೆ ಉಕ್ಕು ಕಾರ್ಖಾನೆ ಪುನರುಜ್ಜೀವನಗೊಳಿಸಲು ಕೇಂದ್ರ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಚಿವಾಲಯದ ಉನ್ನತ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದರು. ಕಾರ್ಖಾನೆಯನ್ನು ಹಂತ ಹಂತವಾಗಿ ಆಧುನೀಕರಣಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಕಾರ್ಖಾನೆಗೆ ಹೊಸ ರೂಪ ನೀಡಲು 15 ಸಾವಿರ ಕೋಟಿ ರೂ. ಬೇಕಾಗಲಿದೆಯೆಂದು ಅಂದಾಜಿಸಲಾಗಿದೆ. ಕಾರ್ಖಾನೆಯು (ವಿಐಎಸ್‌ಎಲ್) ಸಂಡೂರಿನ ರಾಮಗಢ ಅರಣ್ಯ ವಲಯದಲ್ಲಿ ಗಣಿ ಪಡೆಯಲು ಪ್ರಯತ್ನ ನಡೆಸಿದೆ. ಒಂದು ವೇಳೆ ಈ ಗಣಿ ಲಭ್ಯವಾಗದಿದ್ದರೆ ಜಾರ್ಖಂಡ್ ಅಥವಾ ಛತ್ತೀಸಗಢದಿಂದ ಎನ್‌ಎಂಡಿಸಿಯ ಅದಿರು ಪಡೆಯುವ ಬಗ್ಗೆಯೂ ಸಮಾಲೋಚನೆ ನಡೆಸಲಾಯಿತು.

ವಿಸ್ತೃತ ಯೋಜನಾ ವರದಿಯನ್ನು ನೀತಿ ಆಯೋಗ ಪರಿಶೀಲನೆ ನಡೆಸಲಿದೆ. ಬಳಿಕ



ಪ್ರಧಾನಿ ಸಚಿವಾಲಯ ಪರಾಮರ್ಶೆ ನಡೆಸಲಿದೆ. ಆ ನಂತರ, ಕಾರ್ಖಾನೆಯ ಪುನರುಜ್ಜೀವನದ ಪ್ಯಾಕೇಜ್‌ಗೆ ಕೇಂದ್ರ ಸಚಿವ ಸಂಪುಟದಿಂದ ಅನುಮೋದನೆ ಸಿಗಬೇಕಿದೆ.

ವಿಐಎಸ್‌ಎಲ್ ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಅನುಮೋದನೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಆಹ್ವಾನಿಸಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2022ರ ನವೆಂಬರ್‌ನಲ್ಲಿ ಕೈಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ಪ್ರಕ್ರಿಯೆ ಆರಂಭಿಸಿತ್ತು. ಕೇಂದ್ರ ಉಕ್ಕು ಸಚಿವವಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಕುಮಾರಸ್ವಾಮಿ, ಸಂಸ್ಥೆಯ ಪುನರುಜ್ಜೀವನದ ಸಾಧ್ಯಾಸಾಧ್ಯತೆಗಳ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ವರ್ಷಾಂತ್ಯದೊಳಗೆ ಕಾರ್ಖಾನೆಯ ಪುನರುಜ್ಜೀವನಕ್ಕೆ ಪ್ರಧಾನಿ ನರೇಂದ್ರ ಮೋದಿ ಅಡಿಗಲ್ಲು ಹಾಕಲಿದ್ದಾರೆಂದು ಕುಮಾರಸ್ವಾಮಿ ಈ ಹಿಂದೆ ಹೇಳಿದ್ದರು.

## ಡೀಸೆಲ್ ಕದಿಯುತ್ತಿದ್ದ ಇಬ್ಬರಿಗೆ ಕಾರಾಗೃಹ ಶಿಕ್ಷೆ

• ಪ್ರಜೋದಯ ವರದಿ

**ಸಕಲೇಶಪುರ:** ಕೆಎಸ್‌ಆರ್‌ಟಿಸಿ ಡಿಪೋಗೆ ಸರಬರಾಜು ಮಾಡುವ ಟ್ಯಾಂಕರ್‌ನಿಂದ ಸಂಶಯ ಬಾರದಂತೆ ಡೀಸೆಲ್ ಕದಿಯುತ್ತಿದ್ದ ಇಬ್ಬರು ಅಪರಾಧಿಗಳಿಗೆ ಎರಡು ವರ್ಷ ಜೈಲು ಹಾಗು ತಲಾ 30 ಸಾವಿರ ರೂ. ದಂಡ ವಿಧಿಸಿ ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.


ಹಾಸನ ತಾಲ್ಲೂಕು ಹೊನುಘಟ್ಟ ಗ್ರಾಮದ ಸದಾನಂದ, ಬಿ.ಕಾಟೀಹಳ್ಳಿಯ ಪ್ರದೀಪ್ ಅಪರಾಧಿಗಳು. 2017ರಲ್ಲಿ ಡೀಸೆಲ್ ಸರಬರಾಜಿನ ವೇಳೆ ಟ್ಯಾಂಕರ್ ಚಾಲಕರು ಕಳ್ಳತನದಲ್ಲಿ ತೊಡಗಿರುವ ಬಗ್ಗೆ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರು ದೂರು ದಾಖಲಿಸಿ ದ್ದರು. ಟ್ಯಾಂಕರ್ ಒಳಗೆ ಮತ್ತೊಂದು ಸಣ್ಣ ಟ್ಯಾಂಕರ್ ಇಡುತ್ತಿದ್ದರು. 10 ಸಾವಿರ ಲೀಟರ್ ಡೀಸೆಲ್ ತುಂಬಿಸಿಕೊಳ್ಳುತ್ತಿದ್ದ ಅವರು ಅನ್‌ಲೋಡ್ ಮಾಡಿದಾಗ 8.5 ಸಾವಿರ ಲೀಟರ್ ಮಾತ್ರ ಬರುತ್ತಿತ್ತು. ಒಂದೂವರೆ ಸಾವಿರ ಲೀಟರ್ ಅನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಪಟ್ಟಣ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಜೆಎಂಎಫ್‌ಸಿ ನ್ಯಾಯಾಲಯ ನ್ಯಾಯಾಧೀಶ ಜಯಪ್ರಕಾಶ್ ಅವರು ಆರೋಪ ಸಾಬೀತಾದ ಹಿನ್ನಲೆಯಲ್ಲಿ 2 ವರ್ಷ ಜೈಲು ಹಾಗು 30 ಸಾವಿರ ರೂ. ದಂಡ ವಿಧಿಸಿ ಆ.28 ರಂದು ತೀರ್ಪು ನೀಡಿದ್ದಾರೆ.

CMYK CMYK CMYK CMYK

# ಸುರಕ್ಷತೆಗೆ ಮೊದಲ ಆದ್ಯತೆ

ವಿಮಾನ ಮತ್ತು ವಿಮಾನಯಾನದಲ್ಲಿ ಯಾವತ್ತೂ ಸುಧಾರಣೆಗೆ ಒಳಗಾಗುವುದು ಭದ್ರತೆ ಮತ್ತು ಸುರಕ್ಷತೆಯೊಂದೇ. ಈ ಎರಡು ವಿಷಯಗಳಲ್ಲಿ ಯಾವ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ. ಒಂದು ಸಣ್ಣ ಸುಧಾರಣೆಗೆ ಅವಕಾಶವಿದ್ದರೂ, ಅದನ್ನು ನಿರ್ಲಕ್ಷಿಸುವುದಿಲ್ಲ. ಅಮೆರಿಕದ ವಿಮಾನ ಯಾನ ಕಂಪನಿಗಳು ತಮ್ಮ ಹೊಸ ವಿಮಾನಗಳಲ್ಲಿ ಈಗ ಎರಡನೇ ಗೇಟ್ (ಸೆಕೆಂಡರಿ ಕಾಕ್‌ಪಿಟ್ ಬ್ಯಾರಿಯರ್) ಅಳವಡಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಈ ವೈಶಿಷ್ಟ್ಯದ ಮುಖ್ಯ ಉದ್ದೇಶ ವಿಮಾನದ ಕಾಕ್‌ಪಿಟ್‌ಗೆ ಹೆಚ್ಚಿನ ಭದ್ರತೆ ನೀಡುವುದು. ಸೌತ್‌ವೆಸ್ಟ್ ಏರ್‌ಲೈನ್ಸ್‌ಗೆ ಸೇರಿದ ಹೊಸ ಬೋಯಿಂಗ್ 737 ಮ್ಯಾಕ್ 8 ವಿಮಾನವು ಈ ಹೆಚ್ಚುವರಿ ಭದ್ರತಾ ವೈಶಿಷ್ಟ್ಯದೊಂದಿಗೆ ಇತ್ತೀಚೆಗೆ ಹಾರಾಟ ಆರಂಭಿಸಿದೆ. ಅಮೆರಿಕ ಸರಕಾರವು ಈ ನಿಯಮವನ್ನು ಜಾರಿಗೆ ತರಲು 2026ರ ಗಡುವು ನೀಡಿದ್ದರೂ, ಸೌತ್ ವೆಸ್ಟ್ ಏರ್‌ಲೈನ್ಸ್ ಮುಂಚಿತವಾಗಿಯೇ ದನ್ನು ಅಳವಡಿಸಿ, ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಹಾಗಾದರೆ ಈ ಹೊಸ ಭದ್ರತಾ ವೈಶಿಷ್ಟ್ಯ ಏನು? ಸದ್ಯಕ್ಕೆ ವಿಮಾನಗಳಲ್ಲಿ ಕಾಕ್‌ಪಿಟ್‌ಗೆ ಪ್ರವೇಶಿಸಲು ಒಂದು ಬಾಗಿಲು ಇರುತ್ತದೆ, ಇದನ್ನು ವಿಮಾನದ ಸಿಬ್ಬಂದಿ ಮಾತ್ರ ಪ್ರವೇಶಿಸಬಹುದು. ಈ ಹೊಸ ನಿಯಮದ ಪ್ರಕಾರ, ಈ ಬಾಗಿಲಿನ ಹಿಂಭಾಗದಲ್ಲಿ ಇನ್ನೊಂದು ಸೆಕೆಂಡರಿ ಕಾಕ್‌ಪಿಟ್ ಬ್ಯಾರಿಯರ್ ಅಂದರೆ ಎರಡನೇ ಗೇಟ್ ಅಥವಾ ಎರಡನೇ ತಡೆದ್ವಾರವನ್ನು ಅಳವಡಿಸಬೇಕು. ಪೈಲಟ್‌ಗಳು ತಮ್ಮ ಪ್ರಮುಖ ಬಾಗಿಲನ್ನು ತೆರೆದು ಶೌಚಾಲಯಕ್ಕೆ ಅಥವಾ ಇನ್ನಿತರ ಕಾರ್ಯಗಳಿಗೆ ಹೊರಬಂದಾಗ, ಪ್ರಯಾಣಿಕರು ಅಥವಾ ಬೇರೆ ಯಾರಾದರೂ ಕಾಕ್‌ಪಿಟ್ ಪ್ರವೇಶಿಸುವುದನ್ನು ತಡೆಯುವುದು ಇದರ ಮುಖ್ಯ ಉದ್ದೇಶ.



ಈ ಎರಡನೇ ಬಾಗಿಲು ಇರುವುದರಿಂದ ಪೈಲಟ್‌ಗಳು ಹೊರಗೆ ಬಂದಾಗಲೂ ಕಾಕ್‌ಪಿಟ್ ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ. ಈ ಸುರಕ್ಷತಾ ಕ್ರಮವನ್ನು 2001ರ ಸೆಪ್ಟೆಂಬರ್ 11ರ ದಾಳಿಯ ನಂತರ ವಿಮಾನಯಾನ ಭದ್ರತೆಯನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿತ್ತು. ಆದರೆ, ಈ ಹೊಸ ನಿಯಮವನ್ನು ಜಾರಿಗೆ ತರಲು ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ ಹಲವು ವರ್ಷಗಳ ನಂತರ ನಿರ್ಧರಿಸಿತು. ಹಾಗಾದರೆ ಇದು ಕೇವಲ ಸುರಕ್ಷತೆಗಾಗಿ ಮಾತ್ರವೇ? ಇದು ಕೇವಲ ಸುರಕ್ಷತೆಯ ವಿಷಯವಾಗಿರದೇ ಹಲವಾರು ಅಭಿಪ್ರಾಯಗಳಿಗೆ ಕಾರಣವಾಗಿದೆ. ವಿಮಾನಯಾನದಲ್ಲಿ ಸುರಕ್ಷತೆಗೆ ಮೊದಲ ಆದ್ಯತೆ. ಈ ಎರಡನೇ ತಡೆದ್ವಾರ ಹೈಜಾಕ್ ಅಥವಾ ಇತರ ದುಷ್ಕೃತ್ಯಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ವೇಳೆ ಯಾರಾದರೂ ಬಲವಂತವಾಗಿ ಕಾಕ್‌ಪಿಟ್ ಪ್ರವೇಶಿಸಲು ಪ್ರಯತ್ನಿಸಿದರೆ, ಈ ಹೆಚ್ಚುವರಿ ಭದ್ರತಾ ತಡೆದ್ವಾರ ಭದ್ರತಾ ಸಿಬ್ಬಂದಿಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಅವಕಾಶ ನೀಡುತ್ತದೆ. ವಿಮಾನಯಾನ ಕಂಪನಿಗಳು ಈ ಹೊಸ ವೈಶಿಷ್ಟ್ಯವನ್ನು ಅಳವಡಿಸಲು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಇದು ವಿಮಾನದ ಒಳಾಂಗಣ ವಿನ್ಯಾಸ ಮತ್ತು ನಿರ್ವಹಣಾ ವೆಚ್ಚವನ್ನು ಹೆಚ್ಚಿಸಬಹುದು. ಅಲ್ಲದೇ, ಇದರಿಂದ ಸಿಬ್ಬಂದಿಗೆ ಕೆಲವೊಮ್ಮೆ ಅನಾನುಕೂಲ ಉಂಟಾಗಬಹುದು. ವಿಮಾನಗಳಲ್ಲಿ ಈಗಾಗಲೇ ಇರುವ ನಿಯಮಗಳು ಮತ್ತು ಭದ್ರತಾ ವ್ಯವಸ್ಥೆಗಳು ಸಾಕಷ್ಟು ಸುರಕ್ಷಿತವಾಗಿವೆ. ಹೀಗಿರುವಾಗ ಈ ಹೆಚ್ಚುವರಿ ವೈಶಿಷ್ಟ್ಯದ ಅವಶ್ಯಕತೆ ಇದೆಯೇ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಈ ರೀತಿಯ ಕಟ್ಟುನಿಟ್ಟಿನ ಕ್ರಮಗಳು ವಿಮಾನ ಪ್ರಯಾಣವನ್ನು ಅತಿಯಾಗಿ ನಿಯಂತ್ರಣಕ್ಕೆ ಒಳಪಡಿಸುತ್ತವೆ ಎಂದು ವಾದಿಸುವವರೂ ಇದ್ದಾರೆ. ಒಟ್ಟಾರೆಯಾಗಿ, ಸೌತ್‌ವೆಸ್ಟ್ ಏರ್‌ಲೈನ್ಸ್ ಈ ಹೊಸ ವೈಶಿಷ್ಟ್ಯವನ್ನು ಅಳವಡಿಸಿಕೊಳ್ಳುವ ಮೂಲಕ ವಿಮಾನ ಪ್ರಯಾಣದಲ್ಲಿ ಸುರಕ್ಷತೆಗೆ ಮತ್ತಷ್ಟು ಆದ್ಯತೆ ನೀಡಿದೆ. ಇದು ಇತರ ಕಂಪನಿಗಳಿಗೂ ಮಾದರಿಯಾಗಿದ್ದು, ಭವಿಷ್ಯದಲ್ಲಿ ಎಲ್ಲ ಹೊಸ ವಿಮಾನಗಳಲ್ಲಿ ಈ ವ್ಯವಸ್ಥೆ ಇರಲಿದೆ. ಸುರಕ್ಷತೆ ದೃಷ್ಟಿಯಿಂದ ಒಂದು ವಿಮಾನಯಾನ ಸಂಸ್ಥೆ ಕ್ರಮ ಕೈಗೊಂಡರೆ ಉಳಿದವು ಹಿಂದೇಟು ಹಾಕುವುದಿಲ್ಲ. ಹೀಗಾಗಿ ಈ ತಡೆದ್ವಾರ ಮುಂಬರುವ ವಿಮಾನಗಳಲ್ಲಿ ಅಳವಡಿಕೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

**- ವಿಶ್ವೇಶ್ವರ** ಭಟ್

## 04-9-2025 ದಿನ ಭವಿಷ್ಯ



**ಮೇಷ:** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಆಹ್ವಾನಿಸದ ಯಾವುದೇ ಅತಿಥಿ ಇಂದು ಮನೆಗೆ ಬರಬಹುದು ಆದರೆ ಈ ಅತಿಥಿಯ ಅದೃಷ್ಟದ ಕಾರಣದಿಂದ ಇಂದು ನೀವು ಆರ್ಥಿಕ ಲಾಭವನ್ನು ಪಡೆಯಬಹುದು.



**ವೃಷಭ:** ಗರ್ಭಿಣಿಯರಿಗೆ ವಿಶೇಷ ಕಾಳಜಿಯ ದಿನ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಆದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನೀವು ಕುಟುಂಬದ ಸದಸ್ಯರ ಜೊತೆ ಸ್ವಲ್ಪ ತೊಂದರೆ ಹೊಂದಿದ್ದರೂ ಇದು ನಿಮ್ಮ ಮನಶಾಂತಿಯನ್ನು ಹಾಳು ಮಾಡಲು ಅವಕಾಶ ನೀಡಬೇಡಿ.




**ಮಿಥುನ:** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು. ಅರ್ಹರಿಗೆ ವೈವಾಹಿಕ ಮೈತ್ರಿಗಳು. ಇಂದು ವಿಷಯಗಳು ನೀವು ಬಯಸುವ ರೀತಿಯಲ್ಲಿ ನಡೆಯದ ದಿನಗಳಲ್ಲಿ ಒಂದು.



**ಕರ್ಕಾಟಕ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಒಂದು ಮಂಕು ಕವಿದ ಮತ್ತು ನಿಧಾನ ದಿನದಲ್ಲಿ ಸ್ನೇಹಿತರು ಮತ್ತು ಸಂಗಾತಿ ನಿಮಗೆ ಆರಾಮ ಮತ್ತು ಸಂತೋಷ ತರುತ್ತಾರೆ.



**ಸಿಂಹ:** ಆರೋಗ್ಯ ಚೆನ್ನಾಗಿರುತ್ತದೆ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ಇಂದು ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು. ದಿನ ನಿಕಟ ಸಂಬಂಧಿಗಳು ಅಥವಾ ಸ್ನೇಹಿತರಿಂದ ಉತ್ತಮ ಸುದ್ದಿಯೊಡನೆ ಆರಂಭವಾಗುತ್ತದೆ. ಪ್ರಣಯದ ನೆನಪುಗಳು ನಿಮ್ಮ ದಿನವನ್ನು ಆಕ್ರಮಿಸುತ್ತವೆ.



ಕನ್ಯಾ: ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ಇಂದು ನೀವು ಯಾತ್ರೆಯಲ್ಲಿ ಹೋಗುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ. ವಿಶೇಷವಾಗಿ ನಿಮ್ಮ ಹಣದ ಚೀಲವನ್ನು ಎಚ್ಚರಿಕೆಯಿಂದಿಡಿ. ನಿಮ್ಮ ವಿಶ್ವಾಸ ಬೆಳೆಯುತ್ತಿದೆ ಮತ್ತು ಪ್ರಗತಿ ಸ್ಪಷ್ಟವಾಗುತ್ತಿದೆ.



ತುಲಾ: ನಿಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ ವಿಶೇಷವಾಗಿ ಮದ್ಯಪಾನ ಮಾಡಬೇಡಿ. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು, ಎಂದು ನಿಮಗೆ ನನ್ನ ಸಲಹೆ ನೀಡಲಾಗಿದೆ, ಅದನ್ನು ಮಾಡುವುದು ನಿಮ್ಮ ಆರೋಗ್ಯವನ್ನು ಹದಗೆಡಿಸುತ್ತದೆ



**ವೃಶ್ಚಿಕ:** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ. ನಿಮ್ಮ ಮನದನ್ನೆಯ ವಿಚಿತ್ರ ನಡವಳಿಕೆ ನಿಮ್ಮ ಮನಸ್ಥಿತಿಗೆ ಅಸಮಾಧಾನ ತರಬಹುದು.



**ಧನು:** ಸಂಜೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ. ನಿಮ್ಮ ಹಠಮಾರಿ ಪ್ರಕೃತಿ ನಿಮ್ಮ ಪೋಷಕರ ಶಾಂತಿಯನ್ನು ಹಾಳು ಮಾಡಬಹುದು. ನೀವು ಅವರ ಸಲಹೆಯನ್ನು ಪಾಲಿಸಬೇಕು. ಅವರಿಗೆ ನೋವುಂಟುಮಾಡದಿರಲು ಆಜ್ಞಾಧಾರಕರಾಗಿರುವುದು ಒಳ್ಳೆಯದು.



**ಮಕರ:** ನಿಮ್ಮ ಮುಖದಲ್ಲಿ ನಿರಂತರವಾದ ನಗುವಿರುವ ಮತ್ತು ಅಪರಿಚಿತರೂ ಪರಿಚಿತರಂತೆ ತೋರುವ ಒಂದು ದಿನ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ.



**ಕುಂಭ:** ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ಪ್ರೀತಿ ಕೇವಲ ವಸಂತ; ಹೂಗಳು, ಗಾಳಿ, ಬಿಸಿಲು, ಚಿಟ್ಟೆಗಳು.



**ಮೀನ:** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಆದಾಗ್ಯೂ ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

ಬೆನ್ನುಹುರಿಯ ಗಾಯದಿಂದ ಒದಗುವ ವೈಕಲ್ಯದ ತೀವ್ರತೆಯನ್ನು ಗುರುತಿಸಿ ಅದರ ಗಂಭೀರತೆಯ ಬಗ್ಗೆ ಬೆಳಕು ಚೆಲ್ಲುವ ದಿನ

# ಬೆನ್ನುಹುರಿಯ ಗಾಯದ ಗಂಭೀರತೆಯನ್ನು ನಿರ್ಲಕ್ಷಿಸುವಂತಿಲ್ಲ

ಪ್ರತಿ ವರ್ಷದ ಸೆಪ್ಟೆಂಬರ್ 5ರಂದು ವಿಶ್ವ ಬೆನ್ನುಹುರಿ ಗಾಯದ ದಿನವಾಗಿ 2016ರಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಬೆನ್ನುಹುರಿಯ ಗಾಯದ ಅಪಾಯಗಳನ್ನು ತಡೆಯುವ ಮತ್ತು ಈ ಗಾಯದಿಂದ ಒದಗುವ ವೈಕಲ್ಯದ ತೀವ್ರತೆಯನು ಗುರುತಿಸಿ ಅದರ ಗಂಭೀರತೆಯ ಬಗ್ಗೆ ಬೆಳಕು ಚೆಲ್ಲುವ ದಿನವಾಗಿದೆ. ಏಕೆಂದರೆ, ಈ ಗಾಯದಿಂದ ಒದಗುವ ನೋವು, ಅದಕ್ಕೆ ಒಳಗಾಗುವ ವ್ಯಕ್ತಿಗಷ್ಟೇ ಸೀಮಿತವಾಗುವುದಿಲ್ಲ; ಆತನ ಕುಟುಂಬ, ಆತ್ಮೀಯರು, ಅವಲಂಬಿತರು ಹೀಗೆ ಎಲ್ಲರ ಮೇಲೂ ಅದು ಪರಿಣಾಮವನ್ನು ಬೀರುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ, ಜಗತ್ತಿನ 15 ಮಿಲಿಯನ್‌ಗಿಂತಲೂ ಹೆಚ್ಚು ಜನರು ಬೆನ್ನುಹುರಿಯ ಆಘಾತ ಅಥವಾ ಗಾಯದೊಂದಿಗೇ ದಿನದೂಡುತ್ತಿದ್ದಾರೆ. ಪ್ರತಿ ವರ್ಷವೂ ಈ ಯಾದಿಗೆ ಹೊಸಬರ ಸೇರ್ಪಡೆ ಆಗುತ್ತಲೇ ಇರುವುದು ಆತಂಕದ ಸಂಗತಿ.

ಭಾರತದಲ್ಲಿ ಈಗಾಗಲೇ ಸುಮಾರು 15 ಲಕ್ಷ ಮಂದಿ ಬೆನ್ನುಹುರಿಯ ಗಾಯದಿಂದ ಬಳಲುತ್ತಿದ್ದು, ಪ್ರತಿ ವರ್ಷವೂ ಹೊಸದಾಗಿ 20000 ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. 16ರಿಂದ 30ರ ವರೆಗಿನ ವಯೋಮಾನದವರು ಕೂಡ ಈ ಸಮಸ್ಯೆಗೆ ಒಳಗಾಗುತ್ತಿರುವುದು, ಅವರಲ್ಲಿ ಗ್ರಾಮೀಣ ಜನರು ಮತ್ತು ಅಕ್ಷರಜ್ಞಾನ ಇಲ್ಲದವರ ಸಂಖ್ಯೆಯೇ ಹೆಚ್ಚಾಗಿರುವುದು ದುಃಖಕರ ಸಂಗತಿ.

ಇದು ಸಮಾಜದ ಜೀವಂತಿಕೆಯೇ ಕುಸಿಯುತ್ತಿರುವುದರ ಮುನ್ಸೂಚನೆಯಲ್ಲವೇ? ಭಾರತದಲ್ಲಿ ಕಾಣಬರುವ ಬೆನ್ನುಹುರಿ ಗಾಯದ ಸಮಸ್ಯೆಗೆ ರಸ್ತೆ ಅಪಘಾತಗಳು (ಶೇ.45ರಷ್ಟು) ಮತ್ತು ಎತ್ತರದಿಂದ ಬೀಳುವಿಕೆ (ಶೇ.39ರಷ್ಟು) ಪ್ರಮುಖ ಕಾರಣಗಳಾಗಿವೆ ಎನ್ನಲಾಗುತ್ತದೆ.

ಬೆನ್ನುಹುರಿಯ ಗಾಯ (Spinal Cord Injury-SCI) ಎಂದರೆ ಬೆನ್ನುಹುರಿಯ ನರಮೂಲಕ್ಕೆ ಸಂಭವಿಸುವ ಗಾಯ. ಈ ಗಾಯದ ಪರಿಣಾಮವಾಗಿ ದೇಹದ ಕೆಲವು ಭಾಗಗಳಲ್ಲಿ ಚಲನೆಯ ಚಟುವಟಿಕೆಗಳು ಮತ್ತು ಸಂವೇದನೆಗಳು ಸಂಪೂರ್ಣವಾಗಿ ಅಥವಾ ಭಾಗಶಃ ನಷ್ಟವಾಗಬಹುದು. ಬೆನ್ನುಹುರಿಯ ಆಘಾತ ಉಂಟಾದಾಗ ವ್ಯಕ್ತಿಯು ಸಾಮಾನ್ಯವಾಗಿ ತೀವ್ರ ದೈಹಿಕ ಅಂಗವೈಕಲ್ಯಕ್ಕೆ ತುತ್ತಾಗಿ ಮಾನಸಿಕ ಆಘಾತಕ್ಕೆ ಒಳಗಾಗುತ್ತಾನೆ. ಈ ಸಮಸ್ಯೆಯು ವಿನಾಶಕಾರಿಯಾಗಿದ್ದು, ದೈಹಿಕ, ಮಾನಸಿಕ, ಸಾಮಾಜಿಕ ಮುಂತಾದ ನೆಲೆಗಳಲ್ಲಿ ರೋಗಿಯ ಜೀವನದ ಮೇಲೆ ಪರಿಣಾಮವನ್ನು ಬೀರುತ್ತದೆ ಹಾಗೂ ಆತನ ಕುಟುಂಬದ ಆರ್ಥಿಕ ಹೊರೆಯನ್ನೂ ಹೆಚ್ಚಿಸುತ್ತದೆ.

ಪ್ರತಿ ವರ್ಷದ ಸೆಪ್ಟೆಂಬರ್ 5ರಂದು ವಿಶ್ವ ಬೆನ್ನುಹುರಿ ಗಾಯದ ದಿನವಾಗಿ 2016ರಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಬೆನ್ನುಹುರಿಯ ಗಾಯದ ಅಪಾಯಗಳನ್ನು ತಡೆಯುವ ಮತ್ತು ಈ ಗಾಯದಿಂದ ಒದಗುವ ವೈಕಲ್ಯದ ತೀವ್ರತೆಯನ್ನು ಗುರುತಿಸಿ ಅದರ ಗಂಭೀರತೆಯ ಬಗ್ಗೆ ಬೆಳಕು ಚೆಲ್ಲುವ ದಿನವಾಗಿದೆ. ಏಕೆಂದರೆ, ಈ ಗಾಯದಿಂದ ಒದಗುವ ನೋವು, ಅದಕ್ಕೆ ಒಳಗಾಗುವ ವ್ಯಕ್ತಿಗಷ್ಟೇ ಸೀಮಿತವಾಗುವುದಿಲ್ಲ; ಆತನ ಕುಟುಂಬ, ಆತ್ಮೀಯರು, ಅವಲಂಬಿತರು ಹೀಗೆ ಎಲ್ಲರ ಮೇಲೂ ಅದು ಪರಿಣಾಮವನ್ನು ಬೀರುತ್ತದೆ.

ಬೆನ್ನುಹುರಿಯ ಗಾಯಕ್ಕೆ ಒಳಗಾದವರು ದೈಹಿಕವಾಗಿ ಮಾತ್ರವಲ್ಲದೆ, ಮಾನಸಿಕ, ಆರ್ಥಿಕ, ಸಾಮಾಜಿಕವಾಗಿಯೂ ಕುಸಿಯುತ್ತಾರೆ. ಕೆಲಸ-ಕಾರ್ಯ ಇಲ್ಲದಿರುವುದು, ಸಮಾಜದ ನಿರಾಕರಣೆ, ಆತ್ಮ ವಿಶ್ವಾಸದ ಕೊರತೆ ಮುಂತಾದ ಅಂಶಗಳು ಇವರನ್ನು ಹತಾಶರನ್ನಾಗಿಸಬಹುದು. ಇಂಥ ಸಂದರ್ಭಗಳಲ್ಲಿ ಸಮಗ್ರ ಪುನರ್ವಸತಿ ಸೌಲಭ್ಯ ಇಲ್ಲದಿರುವುದು ಮತ್ತೊಂದು ದೊಡ್ಡ ಆಘಾತವಾಗಿ ಪರಿಣಮಿಸುತ್ತದೆ.

ಬೆನ್ನುಹುರಿಯ ಗಾಯದ ಸಮಸ್ಯೆಯಿಂದ ಬಳಲುತ್ತಿರುವವರು, ದೈಹಿಕ ಸ್ಥಿತಿಗತಿಯಲ್ಲಿ ವ್ಯತ್ಯಯವಾದವರಷ್ಟೇ; ಅವರ ಅಂತರ್ಗತ ಶಕ್ತಿ, ಸಾಮರ್ಥ್ಯ, ಪ್ರತಿಭೆ ಮುಂತಾದವನ್ನು ನಮ್ಮ ಸಮಾಜವು ಬೆಂಬಲಿಸಿದರೆ ಅವರು ಉತ್ತಮ ಜೀವನವನ್ನು ನಡೆಸಬಹುದು. ಇದಕ್ಕೆ ಬೇಕಾಗಿರುವುದು- ಪುನರ್ವಸತಿ ವ್ಯವಸ್ಥೆ, ಜನಜಾಗೃತಿ ಮತ್ತು ಸಾಮಾಜಿಕ ಬೆಂಬಲ.

ಸಮರ್ಥ ಪುನರ್ವಸತಿ ಕೇಂದ್ರಗಳು, ಸಮುದಾಯದ ಬೆಂಬಲ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಇಂಥವರ ಬದುಕಿನ ಮರುಪ್ರಾರಂಭಕ್ಕೆ ನೆರವಾಗಬಲ್ಲವು. ಸಂರಕ್ಷಣೆಗೆ ಮಹತ್ವವಿದೆ: ವ್ಯಕ್ತಿಯೊಬ್ಬನು ಬೀಳುವಿಕೆ ಅಥವಾ ನೆಲಕ್ಕೆ ಅಪ್ಪಳಿಸುವಿಕೆಯನ್ನು ತಡೆಯಲು ಸಾಧ್ಯವಾಗುವುದಾದರೆ ಬೆನ್ನುಹುರಿಯ ರಕ್ಷಣೆಯಾದಂತೆ. ಮಾತ್ರವಲ್ಲದೆ ತನ್ನ ಕನಸುಗಳು, ಆಕಾಂಕ್ಷೆಗಳು ಮತ್ತು ಬದುಕನ್ನು ಸಂಪೂರ್ಣವಾಗಿ ಅನುಭವಿಸುವ ಆತನ ಸಾಮರ್ಥ್ಯ ಇವುಗಳ ಸಂರಕ್ಷಣೆಯೂ ಆಗುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಬೀಳುವಿಕೆ/ಅಪ್ಪಳಿಸುವಿಕೆ ಹಾಗೂ ಬೆನ್ನುಹುರಿಯ ಗಾಯದ ನಡುವಿನ ಸಂಬಂಧದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಈ ಅಪಾಯಗಳನ್ನು ತಡೆಗಟ್ಟುವ ಮತ್ತು ಅರಿವು ಮೂಡಿಸುವ ನಿಟ್ಟಿನಲ್ಲಿ ಸಮುದಾಯ ಮಟ್ಟದಲ್ಲಿ ಅಭಿಯಾನಗಳನ್ನು ನಡೆಸಬೇಕಾದ ಅಗತ್ಯವಿದೆ. ಬೀಳುವಿಕೆಯನ್ನು ತಡೆಯಲು ಮನೆ, ಕೆಲಸದ ಸ್ಥಳ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಸುರಕ್ಷಿತ ವಿನ್ಯಾಸ ಮತ್ತು ರಕ್ಷಣಾತ್ಮಕ ಕ್ರಮಗಳ ಅಳವಡಿಕೆಗೆ ಉತ್ತೇಜಿಸಬೇಕಾಗಿದೆ. ಬೆನ್ನುಹುರಿಯ ಗಾಯದ ಸಮಸ್ಯೆ ಇರುವವರಿಗೆ ಮತ್ತು ಅವರ ಆರೈಕೆದಾರರಿಗೆ, ಬೀಳುವಿಕೆ ತಡೆಯಲು ಅಗತ್ಯವಾದ ಉಪಕರಣಗಳನ್ನು ಒದಗಿಸಿ, ಅಗತ್ಯ ತರಬೇತಿಯನ್ನು ನೀಡುವ ಮೂಲಕ ಅವರಿಗೆ ಶಕ್ತಿ ನೀಡಬೇಕಾದ್ದು ಇಂದಿನ ಅಗತ್ಯವಾಗಿದೆ.

ಬೆನ್ನುಹುರಿಯ ಗಾಯದ ರೋಗಿಗಳಿಗೆ ನಿರಂತರ ಆರೈಕೆಯ ಅಗತ್ಯವಿರುತ್ತದೆ. ಏಕೆಂದರೆ, ವೈದ್ಯಕೀಯ ಚಿಕಿತ್ಸೆ / ಆರೈಕೆಯಿಂದ ಬಿಡುಗಡೆ ದೊರೆತ ನಂತರ ಅವರು ಅಲ್ಪಾವಧಿ ಅಥವಾ ದೀರ್ಘಾವಧಿಯ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಬೆನ್ನುಹುರಿಯ ಗಾಯದಂಥ ಸಮಸ್ಯೆಯ ಬಗೆಗಿನ ಅರಿವಿನ ಕೊರತೆಯಿಂದಾಗಿ ರೋಗಿಗಳು ಮತ್ತು ಅವರ ಕುಟುಂಬಿಕರು ಕೂಡ ತಮ್ಮ ಜೀವನಶೈಲಿಯಲ್ಲಿನ ಹಠಾತ್ ಬದಲಾವಣೆಗೆ ಸಾಕ್ಷಿಯಾಗಬೇಕಾಗುತ್ತದೆ ಮತ್ತು ಈ ಬದಲಾವಣೆಯನ್ನು ಸ್ವೀಕರಿಸಲು ಅವರು ದೀರ್ಘ ಸಮಯವನ್ನು ತೆಗೆದುಕೊಳ್ಳಬಹುದು.


ಇನ್ನು ರೋಗಿಗಳ ಪುನರ್ವಸತಿಯೂ ಒಂದು ಸುದೀರ್ಘ ಮತ್ತು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಇದು ಗಾಯವು ಕಾಣಿಸಿಕೊಂಡ ನಂತರದ ಕೆಲವೇ ಸಮಯದಲ್ಲಿ ಪ್ರಾರಂಭವಾಗುತ್ತದೆ ಮತ್ತು ಜೀವಿತಾವಧಿಯಲ್ಲಿ ಇದಕ್ಕೆ ಬಹುವಿಭಾಗೀಯ ತಂಡದ ಆರೈಕೆಯ ಅಗತ್ಯವಿರುತ್ತದೆ.

**ಸೂಕ್ತ ಸಾಧನಗಳು ಅಗತ್ಯ:** ಪ್ರಸ್ತುತ ಲಭ್ಯವಿರುವ ವೈದ್ಯಕೀಯ ಉಪಕರಣಗಳು, ಬೆನ್ನುಹುರಿಯ ಗಾಯದ ಸಮಸ್ಯೆಗೊಳಗಾದ ವ್ಯಕ್ತಿಯ ಜೀವನವನ್ನು ಸುಗಮಗೊಳಿಸಬಲ್ಲವು; ಆದರೆ ಅವುಗಳ ಭ್ರತೆ ಮತ್ತು ವೆಚ್ಚವೇ ಇಂಥವರಿಗೆ ತಡೆಗೋಡೆಯಾಗಿ ಪರಿಣಮಿಸಿಬಿಡುತ್ತವೆ.

ಹೆಚ್ಚಿನ ಉಪಕರಣಗಳು ನಗರದ ಪರಿಸರಕ್ಕೆ ಸೂಕ್ತವಾಗಿದ್ದು, ಒರಟು/ಕಚ್ಚಾ ಭೂಪ್ರದೇಶಗಳನ್ನು ಹೊಂದಿರುವ ಗ್ರಾಮೀಣ ಪರಿಸರಕ್ಕೆ ಸೂಕ್ತವಾಗಿಲ್ಲ. ಸಾಲದೆಂಬಂತೆ, ರೋಗಿಯ ಅಗತ್ಯತೆಯನ್ನು ಪರಿಗಣಿಸದೆಯೇ ಇಂಥ ಕೆಲವು ಉಪಕರಣಗಳನ್ನು ಶಿಫಾರಸು ಮಾಡುವ ಅಭ್ಯಾಸವೂ ಕೆಲವರಲ್ಲಿದೆ.

ಖರೀದಿಗೆ ರೋಗಿಯ ಬಳಿ ಸಾಕಷ್ಟು ಹಣ ಇಲ್ಲದಿದ್ದಲ್ಲಿ, ನಿರ್ದಿಷ್ಟ ಗುಣಮಟ್ಟ ಮತ್ತು ಗಾತ್ರದ ಸಾಧನವೇ ಎಲ್ಲರಿಗೂ ಸರಿಹೊಂದುತ್ತದೆ ಎಂಬ ಮನೋಭಾವವು ಇಂಥ ಶಿಫಾರಸು ದಾರರಲ್ಲಿ ಸಾಮಾನ್ಯವಾಗಿರುತ್ತದೆ ಎನ್ನಲಡ್ಡಿಯಿಲ್ಲ. ಅಂತಿಮವಾಗಿ ಇದು ನಕಾರಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ.

ಬೆನ್ನುಹುರಿಯ ಗಾಯದ ಸಮಸ್ಯೆಯಿರುವ ರೋಗಿಗಳಲ್ಲಿ ಹೆಚ್ಚಿನವರು ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರು. ಇಂಥವರು ದುಬಾರಿ ವೈದ್ಯಕೀಯ ಸಾಧನಗಳನ್ನು ಪಡೆಯಲು ಸಾಧ್ಯವಿಲ್ಲ, ಆದ್ದರಿಂದ ಇಂಥ ರೋಗಿಗಳಿಗೆ ತಕ್ಕನಾದ ಮತ್ತು ಸ್ಥಳೀಯ ಪರಿಸರಕ್ಕೆ ಸರಿಹೊಂದುವಂಥ ಸಾಧನಗಳನ್ನು ರೂಪಿಸುವ ಅಥವಾ ಲಭ್ಯವಿರುವ ಸಾಧನಗಳಲ್ಲಿ ಒಂದಿಷ್ಟು ಸುಧಾರಣೆ ಮಾಡುವ ಅಗತ್ಯವಿದೆ.



ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಮುಂತಾದ ಸಂದರ್ಭಗಳಲ್ಲಿ ಸರಕಾರದ ವತಿಯಿಂದ ಮತ್ತು ಸರಕಾರೇತರ ಸಂಸ್ಥೆಗಳಿಂದ (ಎನ್‌ಜಿಒಗಳಿಂದ) ಒಂದಿಷ್ಟು ವೈದ್ಯಕೀಯ ಸಾಧನಗಳ ವಿತರಣೆಯಾಗುವುದು ವಾಡಿಕೆ; ಆದರೆ ರೋಗಿಯ ಅಗತ್ಯಗಳನ್ನು ಅರಿಯದೆಯೇ ಈ ಸಾಧನಗಳನ್ನು ವಿತರಿಸುವುದರಿಂದ ಅವು ಕೆಲವರಿಗೆ ಪ್ರಯೋಜನಕ್ಕೆ ಬರದಿರುವ ಸಾಧ್ಯತೆಗಳೂ ಇವೆ.

**ಸಮಾನತೆಯ ದೃಷ್ಟಿ ಬೇಕು:** ದಿವ್ಯಾಂಗರಿಗೆ ಬೇಕಿರುವುದು ಸಹಾನುಭೂತಿಯಲ್ಲ, ಸಮಾನತೆಯ ದೃಷ್ಟಿಕೋನ. ಯಾವುದೇ ವೈಕಲ್ಯಕ್ಕೆ ಒಳಗಾದವರು ಪರರ ಬೆಂಬಲವನ್ನಷ್ಟೇ ಅಲ್ಲದೆ, ಸಮಾನ ಅವಕಾಶ, ಗೌರವವನ್ನೂ ಬಯಸುತ್ತಾರೆ. ತಮ್ಮ ಸ್ವಾಭಿಮಾನಕ್ಕೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯಾಗುವುದನ್ನು ಇವರು ಸಹಿಸುವುದಿಲ್ಲ, ಆದ್ದರಿಂದ, ಬೆನ್ನುಹುರಿಯ ಗಾಯದಿಂದ ಬಳಲುತ್ತಿರುವವರನ್ನು ಸಮಾಜವು ದುರ್ಬಲರೆಂದೋ, ನಿಷ್ಪ್ರಯೋಜಕರೆಂದೋ ಪರಿಗಣಿಸುವ ಬದಲು, ಅವರಲ್ಲಿ ಕೆನೆಗಟ್ಟಿರುವ ಪ್ರತಿಭೆ, ಆತ್ಮವಿಶ್ವಾಸ, ಸಾಮರ್ಥ್ಯ ಮತ್ತು ಸಾಧನೆಯ ಉತ್ಸಾಹ ಮುಂತಾದ ಅಂಶಗಳತ್ತ ಗಮನ ಹರಿಸಬೇಕು. ನೆನಪಿರಲಿ, ಬೆನ್ನುಹುರಿಯ ಗಾಯದಿಂದ ಬಳಲುತ್ತಿರುವವರದು ಮೂಲಭೂತವಾಗಿ ಸಹಾನು ಭೂತಿಯ ಕಥೆಗಳಲ್ಲ, ಅವು ಪ್ರೇರಣೆಯ ಕಥೆಗಳು...

**ಮರೆತ ಹಕ್ಕುಗಳು, ಅಗತ್ಯಗಳು:** 21 ಬಗೆಯ ವೈಕಲ್ಯಗಳಲ್ಲಿ ಬೆನ್ನುಹುರಿಯ ಗಾಯವನ್ನು ಇನ್ನೂ ಪ್ರತ್ಯೇಕ ವೈಕಲ್ಯವಾಗಿ ಪರಿಗಣಿಸಲಾಗುತ್ತಿಲ್ಲ, ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ದಿವ್ಯಾಂಗರಿಗೆ ದೊರೆಯುವ ಮಾಸಾಶನ ಬಹಳ ಕಡಿಮೆ ಮೊತ್ತದ್ದಾಗಿದೆ. ಶೇ.75ಕ್ಕಿಂತ ಹೆಚ್ಚು ದಿವ್ಯಾಂಗರು ಪಡೆಯುವ 1400 ರೂಪಾಯಿ ಮಾಸಾಶನವು ಅವರ ವೈದ್ಯಕೀಯ ಅಗತ್ಯಗಳ ನಿರ್ವಹಣೆಗೂ ಸಾಲದಾಗಿದೆ.

ಬೆನ್ನುಹುರಿಯ ಗಾಯದ ಕಾರಣದಿಂದಾಗಿ ಸಂಪೂರ್ಣವಾಗಿ ಆರೈಕೆದಾರರನ್ನು ಅವಲಂಬಿಸಿರುವವರ ನಿದರ್ಶನಗಳಲ್ಲಿ, ಅಂಥ ಆರೈಕೆದಾರರಿಗೆ ಭತ್ಯೆ ನೀಡಬೇಕಾದ ಅಗತ್ಯವಿದೆ. ಸರಕಾರಗಳು ಇಂಥ ಸಮಸ್ಯೆ ಉಳ್ಳವರಿಗಾಗಿ ಪುನಶ್ಚೇತನ ಕೇಂದ್ರಗಳನ್ನು ಪ್ರಾರಂಭಿಸಬೇಕಿದೆ ಮತ್ತು ಈಗಾಗಲೇ ಈ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳಿಗೆ ಒತ್ತಾಸೆಯಾಗಿ ನಿಲ್ಲಬೇಕಿದೆ.

**ಇದು ಬದುಕಿನ ಅಂತ್ಯವಲ್ಲ:** ವೈಕಲ್ಯವೆಂದರೆ ಅಸಮರ್ಥತೆ ಅಥವಾ ಬಲಹೀನತೆ ಎಂದು ಒಂದೇ ಗುಕ್ಕಿಗೆ ನಿರ್ಧರಿಸಿ ಬಿಡುವುದು ಸಲ್ಲ, ಅದು ದೈಹಿಕ ಅಥವಾ ಮಾನಸಿಕ ವ್ಯತ್ಯಯ, ಅಷ್ಟೇ. ಅಂಗ ವೈಕಲ್ಯವು ದುರಂತವಲ್ಲ, ಅದು ಬದಲಾವಣೆಗೆ ಇಂಬು ಕೊಡುವ ಒಂದು ಅಂಶ.

### ಬೆನ್ನುಹುರಿಯ ಗಾಯದ ಲಕ್ಷಣಗಳು

- ಗಾಯದ ತೀವ್ರತೆ ಮತ್ತು ಅದು ಸಂಭವಿಸಿದ ಸ್ಥಳವನ್ನು ಅವಲಂಬಿಸಿ ಲಕ್ಷಣಗಳು ಬದಲಾಗುತ್ತವೆ. ಕೆಲವು ಸಾಮಾನ್ಯ ಲಕ್ಷಣಗಳು:

### ಚಲನೆಯ ನಷ್ಟ:

- ಗಾಯದ ಕೆಳಗೆ ಕೈಕಾಲುಗಳನ್ನು ನಿಯಂತ್ರಿಸಲು ಅಸಮರ್ಥತೆ.

### ಸಂವೇದನೆಯ ನಷ್ಟ:

- ಗಾಯದ ಪ್ರದೇಶದಲ್ಲಿ ಸ್ಪರ್ಶ, ನೋವು ಮತ್ತು ತಾಪಮಾನವನ್ನು ಅನುಭವಿಸಲು ಅಸಮರ್ಥತೆ.

### ಬಾಹ್ಯ ಕ್ರಿಯೆಗಳಲ್ಲಿ ಬದಲಾವಣೆ:

- ಕರುಳಿನ ನಿಯಂತ್ರಣ, ಮೂತ್ರಕೋಶ ನಿಯಂತ್ರಣ, ಮತ್ತು ಲೈಂಗಿಕ ಕಾರ್ಯಗಳಲ್ಲಿ ಬದಲಾವಣೆಗಳು.

### ನೋವು:

- ಗಾಯದ ಸ್ಥಳದಲ್ಲಿ ಅಥವಾ ಗಾಯದ ಸುತ್ತಲೂ ನೋವು.

### ಚಿಕಿತೆ ಮತ್ತು ನಿರ್ವಹಣೆ

- ಬೆನ್ನುಹುರಿಯ ಗಾಯಗಳಿಗೆ ತಕ್ಷಣದ ವೈದ್ಯಕೀಯ ಚಿಕಿತ್ಸೆ ಅತ್ಯಗತ್ಯ. ಚಿಕಿತ್ಸೆಯು ಸಾಮಾನ್ಯವಾಗಿ ಒಳಗೊಂಡಿರುತ್ತದೆ:

### ಶಸ್ತ್ರಚಿಕಿತ್ಸೆ:

- ಬೆನ್ನುಮೂಳೆಯ ಸ್ಥಿರೀಕರಣ.

### ಪುನರ್ವಸತಿ:

- ದೈಹಿಕ ಚಿಕಿತ್ಸೆ ಮತ್ತು ಇತರ ಚಿಕಿತ್ಸೆಗಳ ಮೂಲಕ ಕಾರ್ಯವನ್ನು ಮರಳಿ ಪಡೆಯುವುದು.

### ಸಹಾಯ ಸಾಧನಗಳು:

- ಚಲನಶೀಲತೆ ಮತ್ತು ಸ್ವಾತಂತ್ರ್ಯವನ್ನು ಸುಧಾರಿಸಲು ಗಾಲಿಕುರ್ಚಿಗಳು, ವಾಕಿಂಗ್ ಸಹಾಯಕಗಳು ಮತ್ತು ಇತರ ಅಡಾಪ್ಟಿವ್ ಸಾಧನಗಳು.

### ಮಾನಸಿಕ ಮತ್ತು ಭಾವನಾತ್ಮಕ ಬೆಂಬಲ:

- ಖಿನ್ನತೆ ಮತ್ತು ಇತರ ಮಾನಸಿಕ ತೊಂದರೆಗಳನ್ನು ನಿಭಾಯಿಸಲು ಬೆಂಬಲ.


ಬದಲಾವಣೆಯ ನಿರ್ಧಾರ ಕೈಗೊಳ್ಳಲು, ಹೊಸಹಾದಿ ಹಿಡಿದು ನಿಂತು ಬದುಕಿಗೆ ಹೊಸ ಅರ್ಥ ನೀಡಲು ಎದುರಾದ ಒಂದು ಅವಕಾಶ ಎಂದು ಪರಿಭಾವಿಸಬೇಕು.

ವೈಕಲ್ಯವಿರುವವರದ್ದು ಮುಗಿದ ಬದುಕು ಎಂದು ನೋಡುವುದು ನಮ್ಮ ಸಮಾಜದ ಹಳೆಯ ಮತ್ತು ತಪ್ಪಾದ ದೃಷ್ಟಿಕೋನ. ವಿವಿಧ ತೆರನಾದ ವೈಕಲ್ಯವಿರುವ ಅನೇಕ ವ್ಯಕ್ತಿಗಳು ಇಂದು ಕಲೆ, ಕ್ರೀಡೆ, ಶಿಕ್ಷಣ, ಉದ್ಯಮ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆಗಳನ್ನು ಮಾಡುತ್ತಿದ್ದಾರೆ. ತಮ್ಮ ವೈಕಲ್ಯವನ್ನು ಹಿನ್ನಡೆ ಅಥವಾ ನ್ಯೂನತೆ ಎಂದು ಭಾವಿಸದೆ, ಶಕ್ತಿಯ ರೂಪವಾಗಿ ಬಳಸಿಕೊಂಡು ಸಮಾಜಕ್ಕೆ ಪ್ರೇರಣಾದಾಯಿಯಾಗಿದ್ದಾರೆ.

**ಮಿಕ್ಕವರ ಪಾತ್ರವೇನು?:** ದಿವ್ಯಾಂಗ ವ್ಯಕ್ತಿಗಳಿಗೆ ಸಹಾಯಹಸ್ತ ನೀಡುವುದು ಕೇವಲ ದಯೆಯ ಚಟುವಟಿಕೆ ಆಗಿರಬಾರದು; ಅದು ಸಮಾನ ಅವಕಾಶ ಮತ್ತು ಗೌರವದ ಹಕ್ಕಿನ ಪ್ರಕ್ರಿಯೂ ಆಗಬೇಕು. ಶಿಕ್ಷಣ, ಉದ್ಯೋಗ, ಸಾರಿಗೆ, ಆರೋಗ್ಯ ಸೇವೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಈ ಸಮಾನತೆ ಪ್ರತಿಬಿಂಬಿಸಬೇಕು. ದಿವ್ಯಾಂಗರಿಗೆ ಅಗತ್ಯವಿರುವ ಸಹಾಯಧನ, ಸೌಲಭ್ಯಗಳು, ತಾಂತ್ರಿಕ ನೆರವು, ಪುನಶ್ಚೇತನ ಕೇಂದ್ರಗಳ ವ್ಯವಸ್ಥೆ ಮುಂತಾದವುಗಳ ಕಡೆಗೆ ಸಾಮಾಜಿಕ ನೆಲೆಯಲ್ಲಿ, ಸರಕಾರಿ ಮಟ್ಟದಲ್ಲೂ ಸಂಬಂಧಪಟ್ಟವರು ಗಮನಹರಿಸಬೇಕು.

ಸಮಾಜದಲ್ಲಿ ಎಲ್ಲರಂತೆ ಅವರಿಗೂ ಸ್ಥಾನಮಾನವನ್ನು ಕಲ್ಪಿಸುವ ನಿಟ್ಟಿನಲ್ಲಿ ಗಂಭೀರ ಚಿಂತನೆಯಾಗಬೇಕು. ಬೆನ್ನುಹುರಿಯ ಗಾಯದ ಕುರಿತಾದ ಅರಿವಿನ ಕೊರತೆಯನ್ನು ನೀಗಲು ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ.

**- ಡಾ.ಎ.** ಜಯಕುಮಾರ ಶೆಟ್ಟಿ



# ಕರಿಮೆಣಸಿನ ಪರಾಗಸ್ಪರ್ಶ ಮತ್ತು ವಾತಾವರಣ

ಮುಂಗಾರು ಮಳೆ ಪ್ರಾರಂಭದಲ್ಲಿ ಕರಿಮೆಣಸು ಹೂ ಕರೆ ಬಿಡುವ ಸಮಯ. ಮೊದಲ ಮಳೆ ಸಿಂಚನವಾದ ಕೂಡಲೇ ಬಳ್ಳಿ ಚಿಗುರಲು ಪ್ರಾರಂಭವಾಗುತ್ತದೆ. ಕೆಲವು ಸ್ವಲ್ಪ ತಡವಾಗುತ್ತದೆ. ಮತ್ತೆ ಕೆಲವು ಮೇ ತಿಂಗಳ ಕೊನೆಗೇ ಹೂ ಕರೆ ಬಿಡಲು ಪ್ರಾರಂಭವಾಗುತ್ತದೆ. ಇದು ಬಳ್ಳಿಯ ಆರೋಗ್ಯ ಮತ್ತು ತಳಿಯ ಮೇಲೆ ಅವಲಂಭಿತವಾಗಿದೆ.

ಕರಿಮೆಣಸಿನಲ್ಲಿ ಹೂ ಕರೆ ಬಿಡುವಾಗ ತಂಪು ವಾತಾವರಣ ಇರಬೇಕು. ಹಾಗಿದ್ದಾಗ ಅದು ಫಲಿತಗೊಂಡು ಕಾಳುಗಳಾಗುತ್ತದೆ. ಒಂದು ವೇಳೆ ಬಿಸಿ ವಾತಾವರಣ ಇದ್ದರೆ ಕರೆಗಳು ಅರ್ಧಂಬರ್ಧ ಫಲಿತಗೊಳ್ಳುವುದು, ಉದುರಿ ಹೋಗುವುದು ಆಗುತ್ತದೆ. ಆದ ಕಾರಣ ಬೇಗೆ ಕರೆ ಬಿಡುವುದು ಉತ್ತಮವಲ್ಲ. ಕೆಲವು ಸ್ಥಳೀಯ ತಳಿಗಳು ಬೇಗ ಹೂ ಬಿಡುವುದು ಅದರ ಗುಣ ಧರ್ಮವಾದ ಕಾರಣ ಅದರಲ್ಲಿ ಅಧಿಕ ಪ್ರಮಾಣದಲ್ಲಿ ಕರೆಗಳಿರುತ್ತವೆ. ಆದರೆ ಕಾಳುಗಳು ವಿರಳವಾಗಿರುತ್ತವೆ.



ಕರಿಮೆಣಸಿನ ತಳಿ ಆಯ್ಕೆ ಮಾಡುವಾಗ ತಡವಾಗಿ ಕರೆ ಬಿಡುವ ತಳಿಗಳಾದ ಪಣಿಯೂರು, ಕರಿಮುಂಡ ಆಯ್ಕೆ ತಳಿಗಳನ್ನು ಬೆಳೆಸುವುದು ಸೂಕ್ತ. ಕರಾವಳಿ ಭಾಗದಲ್ಲಿ ಬೇಗ ಕೊಯಿಲು ಮುಗಿಯುತ್ತದೆ. ಮಾರ್ಚ್ ತಿಂಗಳಿಗೆ ಕೊಯಿಲು ಮುಗಿಯುವ ಕಡೆ ಬೇಗ ಹೂ ಕರೆ ಬಿಡುತ್ತದೆ.

ಕಠಾವು ನಂತರ ಮೂರು ವಾರ ತನಕ ನೀರಾವರಿ ಕಡಿಮೆ ಮಾಡಿದಾಗ ಬಳ್ಳಿಗೆ ಉತ್ತಮವಾಗಿ ಚಿಗುರಲು ಅನುಕೂಲವಾಗುತ್ತದೆ. ಹಾಗೆಂದು ಮಿಶ್ರ ಬೆಳೆಯಾಗಿ ಬೆಳೆಸುವಾಗ ನೀರಾವರಿ ತುಂಬಾ ಕಡಿಮೆ ಮಾಡಲಿಕ್ಕಾಗುವುದಿಲ್ಲ.

ಒಮ್ಮೆ ಹೂ ಕರೆ ಮೂಡಿ ಅದು ಅರ್ಧಂಬರ್ಧ ಕಾಯಿ ಕಚ್ಚಿದರೂ ಸಹ, ಒಂದು ವೇಳೆ ಉದುರಿದರೂ ಸಹ ಮಳೆ ಪ್ರಾರಂಭವಾಗಿ ಕೆಲವು ದಿನಗಳ ನಂತರ ಮತ್ತೆ ಪೂರ್ತಿಯಾಗಿ ಚಿಗುರಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಕರೆ ಬಿಡುತ್ತದೆ. ಅದರ ಕಟ್ಟುವಿಕೆ ಉತ್ತಮವಾಗಿರುತ್ತದೆ. ಇದನ್ನು ಉಳಿಸಿಕೊಂಡರೂ ಬೆಳೆ ಸಾಕಾಗುತ್ತದೆ.

ಮಳೆಗಾಲದಲ್ಲಿ ಉತ್ತಮ ರೀತಿಯಲ್ಲಿ ಹೂವು ಕರೆ ಬಿಡುವುದಕ್ಕೆ ಬೇಸಿಗೆಯ ದಿನಗಳಲ್ಲಿ ಮಾಡುವ ಬಳ್ಳಿ ಆರೈಕೆ ಪ್ರಾಮುಖ್ಯವಾದು. ಬಳ್ಳಿಯ ಆರೈಕೆ ಎಂದರೆ ಮುಖ್ಯವಾಗಿ ಒದಗಿಸಿಕೊಡುವ ಪೊಷಕಾಂಶಗಳು. ಬಳ್ಳಿಯಲ್ಲಿ ಸಂಗ್ರಹಿತ ಪೋಷಕಾಂಶಗಳಿದ್ದಾಗ ಅದು ಉತ್ತಮ ಚಿಗುರನ್ನು ಉತ್ತೇಜಿಸುತ್ತದೆ. ಕಡಿಮೆ ಇದ್ದಾಗ ಅದು ವ್ಯತಿರಿಕ್ತವಾಗುತ್ತದೆ. ಕೊಯಿಲು ಮುಗಿದ 1 ತಿಂಗಳ ಒಳಗೆ ಒಮ್ಮೆ ಪತ್ರ ಸಿಂಚನದ ಮೂಲಕ ಗೊಬ್ಬರವನ್ನು ಕೊಡಬೇಕು. ಜೊತೆಗೆ ತೇವಾಂಶ ಇರುವಾಗ ಬುಡಕ್ಕೂ ಕೊಡಬೇಕು. ಮಳೆಗಾಲ ಪ್ರಾರಂಭವಾಗುವ ಮೇ ತಿಂಗಳಲ್ಲಿ ಮತ್ತೊಮ್ಮೆ ಪೋಷಕಾಂಶ ಸಿಂಪರಣೆ ಮಾಡಬೇಕು. ಮೊದಲ ಬಾರಿ ಸಿಂಪರಣೆ ಮಾಡುವಾಗ 200 ಲೀ ನೀರಿಗೆ ಮುಕ್ಕಾಲು ಅಥವಾ 1 ಕಿಲೋ 19:19:19 ಎರಡನೇ ಬಾರಿ ಸಿಂಪಡಿಸುವಾಗ 13:40:13 ಜೊತೆಗೆ ಪ್ರತೀ 200 ಲೀ. ದ್ರಾವಣಕ್ಕೆ 100 ಗ್ರಾಂ ನಷ್ಟು ಸತು, ಮ್ಯಾಂಗನೀಸ್ ಬೋರಾನ್ ಉಳ್ಳ ಸಿಂಪರಣಾ ದರ್ಜೆಯ ಸೂಕ್ಷ್ಮ ಪೋಷಕಾಂಶ, 50 ಗ್ರಾಂ ನಷ್ಟು ಕಿಲ್ಲೇಟೆಡ್ ಮೆಗ್ನೀಯಂ ಸೇರಿಸಿ ಸಿಂಪರಣೆ ಮಾಡಬೇಕು. ಎಲೆಗಳಿಗೆಲ್ಲಾ ಬೀಳುವಂತೆ ಸಿಂಪರಣೆ ಮಾಡಬೇಕು. ಅಧಿಕ ಒತ್ತಡದಲ್ಲಿ ಎಲೆಗಳು ಅಲ್ಲಾಡುವಂತೆ ಸಿಂಪಡಿಸುವುದರಿಂದ ಎಲೆಯ ಎರಡೂ ಭಾಗಕ್ಕೂ ಪೋಷಕಾಂಶ ದೊರೆಯುತ್ತದೆ. ಎರಡನೇ ಸಿಂಪರಣೆಯನ್ನೂ ಇದೇರೀತಿ ಮಾಡಬೇಕು. ಜೂನ್ ಕೊನೇ ವಾರ ಅಥವಾ ಜುಲೈ ಮೊದಲ ವಾರದಲ್ಲಿ ಮೂರನೇ ಪತ್ರ ಸಿಂಚನ ಸಿಂಪರಣೆ ಮಾಡಬೇಕು. ಈ ಸಮಯದಲ್ಲಿ ಬಹುತೇಕ ಹೂ ಕರೆಗಳು ಮೂಡಿರಬೇಕು. ಈ ಸಮಯದಲ್ಲಿ ಸಾರಜನಕ ಮತ್ತು ರಂಜಕ ಉಳ್ಳ ಗೊಬ್ಬರವನ್ನು ಸಿಂಪರಣೆ ಮಾಡುವುದು ಉತ್ತಮ. ಇದಕ್ಕಾಗಿ 12:61:0 200 ಲೀ ನೀರಿಗೆ ಮುಕ್ಕಾಲು ಕಿಲೋ ಬೆರೆಸಿ ಸಿಂಪರಣೆ ಮಾಡಿ. ಅಗತ್ಯವಿದ್ದರೆ ಮಾತ್ರ ಸೂಕ್ಷ್ಮ ಪೋಷಕಾಂಶಗಳನ್ನು ಸೇರಿಸಿರಿ. 200 ಲೀ. ನೀರಿಗೆ 50 ಗ್ರಾಂ ನಷ್ಟು ನೀರಿನಲ್ಲಿ ಕರಗುವ ಬೋರಾನ್ ಸೇರಿಸುವುದು ಉತ್ತಮ. ಈ ಮೂರು ಸಿಂಪರಣೆಗಳಿಂದ ಕರೆಯ ಉದ್ದ ಜಾಸ್ತಿಯಾಗುತ್ತದೆ. ಕರೆ ಹೆಚ್ಚು ಬರುತ್ತದೆ. ಕರೆಯಲ್ಲಿ ಫಲಿತ ಗೊಳ್ಳುವ ಹೂವುಗಳು ಹೆಚ್ಚುತ್ತದೆ.

ಕರಿಮೆಣಸಿನಲ್ಲಿ 86-95 % ಸ್ವಕೀಯ ಪರಾಗ ಸ್ಪರ್ಷ ನಡೆಯುತ್ತದೆ. ಕರೆಯ ತುತ್ತ ತುದಿಯಲ್ಲಿರುವ ಹೂವಿನ ಪರಾಗರೇಣು ಕೆಳಗಿನ ಪುಷ್ಪದ ಶಲಾಕಾಗ್ರದ ಮೇಲೆ ಬೀಳುತ್ತಾ, ಕೆಳಕೆಳಗೆ ಇಳಿಯುತ್ತಾ ಬರುತ್ತದೆ. ಅ ಹೆಚ್ಚಾಗಿ ದ್ವಿಲಿಂಗೀಯ ಹೂವುಗಲೇ ಇರುತ್ತದೆ. ಹೂವಿನ ಗಂಡು ಭಾಗ ಇಬ್ಬದಿಯಲ್ಲೂ, ಹೆಣ್ಣು ಭಾಗ ಮಧ್ಯದಲ್ಲೂ ಇರುತ್ತದೆ. ಇದರ ಪರಾಗವು 5 ದಿನಗಳ ಕಾಲ ಜೀವಂತ ಇರುತ್ತದೆ. ಕೀಟ- ಗಾಳಿ ಮೂಲಕ ಪರಾಗ ಸ್ಪರ್ಷ ತುಂಬಾ ಕಡಿಮೆ. ಆದ ಕಾರಣ ಹದವಾದ ಜುಂಪರು ಮಳೆ ಬಂದಾಗ ಕಾಯಿ ಕಚ್ಚುವಿಕೆ ಚೆನ್ನಾಗಿರುತ್ತದೆ. ಮಳೆ ಬಾರದಿದ್ದರೂ ವಾತಾವರಣ ತಂಪಾಗಿದ್ದರೂ ಕಾಯಿ ಕಚ್ಚುತ್ತದೆ. ಮೆಣಸಿನ ಪರಾಗ ಸ್ಪರ್ಷಕ್ಕೆ ಮಳೆ ನೀರಿನ ಅವಶ್ಯಕತೆ ಇರುವುದಿಲ್ಲ.

ಮಳೆಗಾಲ ಪ್ರಾರಾಂಭವಾಗುವಾಗ ಬುಡ ಭಾಗಕ್ಕೆ ಮೊದಲ ಕಂತಿನ ಗೊಬ್ಬರವನ್ನು ಕೊಡಬೇಕು. ಇದೂ ಸಹ ಉತ್ತಮ ಫಸಲಿಗೆ ಸಹಕರಿಸುತ್ತದೆ. ಹೂ ಬಿಡುವ ಸಮಯದಲ್ಲಿ ಪೊಟ್ಯಾಶೀಯಂ ಫೋಸ್ಫೋನೇಟ್ ದ್ರಾವಣವನ್ನು ಸಿಂಪರಣೆ, ಮಾಡುವುದಾದರೆ ಲೀ.ಗೆ 4 ಮಿಲಿ ಗಿಂತ ಹೆಚ್ಚು ಬಳಕೆ ಮಾಡಬೇಡಿ. ಬೋರ್ಡೋ ದ್ರಾವಣಕ್ಕೂ ಅಧಿಕ ಸುಣ್ಣ ಸೇರಿಸಬೇಡಿ. 1 ಕಿಲೋ ತುತ್ತೆಗೆ 34 ಕಿಲೋ ಸುಣ್ಣ ಅಥವ 1 ಕಿಲೋ ಸುಣ್ಣ ಗರಿಷ್ಟ ಪ್ರಮಾಣದ್ದಾಗುತ್ತದೆ. ಹೆಚ್ಚು ಸುಣ್ಣ ಸೇರಿಸಿದರೆ ಎಳೆ ಹೂ ಕರೆಗಳಿಗೆ ಘಾಸಿಯಾಗಬಹುದು.

**- ರಾಧಾಕೃಷ್ಣ** ಹೊಳ್ಳ



# ಸಾವಿರ ಹಾಡಿನ ಒಬ್ಬ ಸರ್ದಾರ!

ಕೋವಿಡ್ ಸಮಯದಲ್ಲಿ ಆಸಕ್ತಿ ಇದ್ದವರು ಹಾಡು ಹಾಡಲು ತುಂಬಾ ಆಪ್‌ಗಳು ಸಂಸ್ಥೆಗಳು ತಂತ್ರಜ್ಞಾನಗಳು ಬೆಳಕಿಗೆ ಬಂದವು.

ಅದರಲ್ಲಿ ಸ್ಟಾರ್ ಮೇಕರ್ ಎಂಬ ಆ್ಯಪ್ ಕೂಡ ಒಂದು. ಅಲ್ಲಿ ಚೆನ್ನಾಗಿ ಹಾಡುವ ಅನೇಕ ಗಾಯಕಿಯರನ್ನು ಪತ್ತೆ ಮಾಡಿಕೊಂಡು ಅವರ ಜೊತೆ ಸುಮಾರು ಆರುನೂರು ಯುಗಳ ಗೀತೆಗಳನ್ನು ನಾನು ಹಾಡಿದ್ದೇನೆ. ಮತ್ತು ಸುಮಾರು 400 ಹಾಡುಗಳನ್ನು ಬೇರೆ ಭಾಷೆಯಿಂದ -ಬಹುತೇಕ ಹಿಂದಿ- ಅನುವಾದ ಮಾಡಿ ಹಾಡಿದ್ದೇನೆ. ಇವುಗಳಲ್ಲಿ ಸುಮಾರು 40 ಪೂರ್ತಿಯಾಗಿ ಅನುವಾದ ಆಗಿವೆ. ಇನ್ನು ಸುಮಾರು 40 ಅರ್ಧ ಅನುವಾದ, ಉಳಿದವು ಕೆಲವೇ ಸಾಲು ಅನುವಾದ ಆಗಿವೆ.

ಈ ಸಾವಿರ ಹಾಡುಗಳನ್ನು ನಾನು ನನ್ನ ಮೊಬೈಲ್ಗೆ ಡೌನ್ಲೋಡ್ ಮಾಡಿಕೊಂಡಿದ್ದೇನೆ . ನಾನು ತಕ್ಕಮಟ್ಟಿಗೆ ಚೆನ್ನಾಗಿ ಹಾಡುತ್ತೀನಿ ಅಂತ ಈ ಸಮಯದಲ್ಲಿ ಹೇಳಬೇಕು.

ಹಾಗಾಗಿ ನಾನು ಸಾವಿರ ಹಾಡಿನ ಒಬ್ಬ ಸರ್ದಾರ ಆಗಿದ್ದೇನೆ!




### ರಷ್ಯಾದ ತೈಲದ ಬೆಲೆ ಬ್ಯಾರೆಲ್‌ಗೆ 3 ರಿಂದ 4 ಅಮೆರಿಕನ್ ಡಾಲರ್‌ನಷ್ಟು ಕಡಿಮೆ ಮಾಡಲು ನಿರ್ಧಾರ

# ಭಾರತಕ್ಕೆ ಮತ್ತೆ ಕಚ್ಚಾತೈಲ ರಿಯಾಯಿತಿ ಘೋಷಿಸಿದ ರಷ್ಯಾ

• ಪ್ರಜೋದಯ ವರದಿ

**ಹೊಸದಿಲ್ಲಿ/ಮಾಸ್ಕೋ:** ಭಾರತ ಮತ್ತು ರಷ್ಯಾದ ಕಚ್ಚಾತೈಲ ಸಂಬಂಧಕ್ಕೆ ಅಂತ್ಯಹಾಡಬೇಕು ಎಂದು ಅಮೆರಿಕ ಅದೆಷ್ಟು ಪ್ರಯತ್ನ ಮಾಡುತ್ತದೆಯೋ, ಅದಕ್ಕೆ ವ್ಯತರಿಕ್ತವಾಗಿ ಉಭಯ ರಾಷ್ಟ್ರಗಳ ತೈಲ ಸಂಬಂಧ ಅಷ್ಟೇ ಗಟ್ಟಿಯಾಗುತ್ತಿದೆ. ಕೆಲವು ದಿನಗಳ ಹಿಂದಷ್ಟೇ ಈ ದೋಸ್ತಿಗೆ ಸಾಕ್ಷಿಯಾಗಿ ಭಾರತಕ್ಕೆ ಕಚ್ಚಾತೈಲ ರಿಯಾಯಿತಿ ಘೋಷಿಸಿದ್ದ ರಷ್ಯಾ, ಈಗ ಮತ್ತಷ್ಟು ರಿಯಾಯಿತಿಗೆ ಮುಂದಾಗಿದೆ.



ಭಾರತ ಇನ್ನೂ ಅಮೆರಿಕದ ಸುಂಕದ ಹೊರೆಯನ್ನು ಎದುರಿಸುತ್ತಿರುವುದರಿಂದ, ಭಾರತಕ್ಕೆ ರಷ್ಯಾದ ತೈಲದ ಬೆಲೆ ಬ್ಯಾರೆಲ್‌ಗೆ 3 ರಿಂದ 4 ಅಮೆರಿಕನ್ ಡಾಲರ್‌ನಷ್ಟು ಕಡಿಮೆ ಮಾಡಲು ರಷ್ಯಾ ನಿರ್ಧರಿಸಿದೆ. ಬ್ಲೂಮ್‌ಬರ್ಗ್ ವರದಿಯ ಪ್ರಕಾರ, ಸೆಪ್ಟೆಂಬರ್ ಅಂತ್ಯ ಮತ್ತು ಅಕ್ಟೋಬರ್ ತಿಂಗಳಲ್ಲಿ ಲೋಡ್ ಆಗುವ ಸರಕುಗಳಿಗೆ, ರಷ್ಯಾದ ಉರಲ್ ದರ್ಜೆಯ ಬೆಲೆಯನ್ನು ಕಡಿಮೆ ಬೆಲೆಗೆ ನೀಡಲಾಗುತ್ತದೆ.

ಇತ್ತೀಚಿಗೆ ಚೀನಾದ ಟಿಯಾಂಜಿನ್ ನಗರದಲ್ಲಿ ನಡೆದಿದ್ದ ಶಾಂಘೈ ಸಹಕಾರ ಒಕ್ಕೂಟ (ಎಸ್‌ಸಿಒ)ದ ಶೃಂಗಸಭೆಯಲ್ಲಿ, ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ದ್ವಿಪಕ್ಷೀಯ ಸಭೆ ನಡೆಸಿದ್ದರು. ಇದಾದ ಕೆಲವೇ ದಿನಗಳಲ್ಲಿ ರಷ್ಯಾ ಮತ್ತೆ ಭಾರತಕ್ಕೆ ಕಚ್ಚಾತೈಲ ದರದಲ್ಲಿ ರಿಯಾಯಿತಿ ಘೋಷಿಸಿರುವುದು, ಉಭಯ ರಾಷ್ಟ್ರಗಳ ಸಂಬಂಧ ಗಟ್ಟಿಯಾಗುತ್ತಿದೆ ಎಂಬುದಕ್ಕೆ ಸೂಕ್ತ ಸಾಕ್ಷಿಯಾಗಿದೆ.

ರಷ್ಯಾದ ತೈಲವನ್ನು ಖರೀದಿಸಿ ಉಕ್ರೇನ್ ಯುದ್ಧಕ್ಕೆ ಉತ್ತೇಜನ ನೀಡಿದ ಆರೋಪದ ಮೇಲೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಭಾರತದ ಸರಕುಗಳ ಮೇಳೆ ಶೇ. 50ರಷ್ಟು ಸುಂಕ ಹೇರಿದೆ. ಅಮೆರಿಕದ ಈ ಸುಂಕ ಹೇರಿಕೆಯನ್ನು ವಿರೋಧಿಸಿರುವ ಭಾರತ, ತನ್ನ ಕಾರ್ಯತಂತ್ರ ಬದಲಾಯಿಸಿಕೊಂಡಿದ್ದು, ರಷ್ಯಾ ಮತ್ತು ಚೀನಾದೊಂದಿಗೆ ವಾಣಿಜ್ಯ ಮತ್ತು ರಾಜತಾಂತ್ರಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿದೆ.

ಹೆಚ್ಚುವರಿ ಸುಂಕಗಳನ್ನು ಹೇರುವ ಭಾರತವನ್ನು ಮಣಿಸಬಹುದು ಎಂದುಕೊಂಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಗ ತಮ್ಮ ಸುಂಕ ಹೇರಿಕೆ ತಮಗೇ ತಿರುಗುಬಾಣ ಆಗುತ್ತಿರುವುದನ್ನು ಕಂಡು ದಂಗಾಗಿದ್ದಾರೆ. ಎಸ್‌ಸಿಒ ಶೃಂಗಸಭೆಯಲ್ಲಿ ಭಾರತ, ರಷ್ಯಾ ಮತ್ತು ಚೀನಾ ಒಗ್ಗಟ್ಟು ಪ್ರದರ್ಶಿಸಿರುವುದು, ಅಮೆರಿಕ ಅಧ್ಯಕ್ಷರಿಗೆ ಅರಗಿಸಿಕೊಳ್ಳಲಾಗುತ್ತಿಲ್ಲ. ಹಾಗೂ ಇಲ್ಲದ ಆರೋಪ ಮಾಡಲಾಗುತ್ತಿದೆ.



ರಷ್ಯಾದ ಕಚ್ಚಾತೈಲ ಖರೀದಿಗೆ ಸಂಬಂಧಿಸಿದಂತೆ ಅಮೆರಿಕ ದೇಶದ ಯಾವುದೇ ಒತ್ತಡಕ್ಕೆ ಮಣಿಯದಿರಲು ಭಾರತ ನಿರ್ಧಾರ ಮಾಡಿದೆ. ಭಾರತದ ಮೇಲೆ ಒತ್ತಡ ಹಾಕುವುದು ಅಸಾಧ್ಯ ಎಂದು ಮನಗಂಡಿರುವ ಟ್ರಂಪ್ ಆಡಳಿತ ಮತ್ತು ಸಚಿವರು ಕೈಲಾಗದವನು ಮೈಪರಚಿ ಕೊಂಡಂತೆ ಈಗ ಭಾರತದ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಲಾರಂಭಿಸಿದ್ದಾರೆ.

ಇತ್ತೀಚಿಗೆ ಭಾರತ-ರಷ್ಯಾ ಕಚ್ಚತೈಲ ಸಂಬಂಧವನ್ನು ಟೀಕಿಸಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೋ, ಭಾರತ ಉನ್ನತ ವರ್ಗಕ್ಕೆ ಲಾಭ ಮಾಡಿಕೊಡಲು ಭಾರತದ ಜನರ ದುಡ್ಡಿನಲ್ಲಿ ರಷ್ಯಾದೊಂದಿಗೆ ವರ್ತಿಸುತ್ತಿದೆ ಎಂದು ಆರೋಪಿಸಿದ್ದರು. ಪೀಟರ್ ನವರೋ ಅವರ ಬ್ರಾಹ್ಮಣ ಲಾಭಕೋರತನ ಹೇಳಿಕೆ, ಭಾರತದಲ್ಲಿ ತೀವ್ರ ಆಕ್ರೋಶಕ್ಕೆ ಗುರಿಯಾಗಿತ್ತು.

ಇದೀಗ ಮತ್ತೆ ರಷ್ಯಾವು ಭಾರತಕ್ಕೆ ಉರಲ್ ದರ್ಜೆಯ ಕಚ್ಚಾತೈಲದ ಮೇಲೆ, ಬ್ಯಾರೆಲ್‌ಗೆ 3 ರಿಂದ 4 ಡಾಲರ್ ರಿಯಾಯಿತಿ ಘೋಷಿಸಿದ್ದು, ಉಭಯ ರಾಷ್ಟ್ರಗಳ ನಡುವೆ ಗಟ್ಟಿಗೊಳ್ಳುತ್ತಿರುವ ಸಂಬಂಧದ ಪ್ರತೀಕವಾಗಿದೆ ಎಂದೇ ಹೇಳಲಾಗುತ್ತಿದೆ.

## ರಾಜೀನಾಮೆಗೆ ಮುಂದಾದ ಭೋವಿ ನಿಗಮ ಅಧ್ಯಕ್ಷ

• ಪ್ರಜೋದಯ ವರದಿ

**ಶಿವಮೊಗ್ಗ:** ಭ್ರಷ್ಟಾಚಾರ ಆರೋಪ ಕೇಳಿಬಂದ ಹಿನ್ನಲೆಯಲ್ಲಿ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ನಿಗಮದ ಅಧ್ಯಕ್ಷ ಎಸ್.ರವಿಕುಮಾರ್ ಅವರು ತಿಳಿಸಿದ್ದಾರೆ.



ನಿಗಮದಲ್ಲಿ ಹಣಕಾಸಿನ ಶಿಸ್ತು ಹಾಗು ಪಾರದರ್ಶಕತೆ ರೂಪಿಸಿದ ಕಾರಣಕ್ಕೆ ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಪಿತೂರಿ ನಡೆಸಲಾಗಿದೆ. ಆದರೂ ಪಕ್ಷಕ್ಕೆ ಮುಜುಗರ ಉಂಟಾಗುವುದನ್ನು ತಡೆಯಲು ನೈತಿಕ ಹೊಣೆ ಹೊತ್ತು ರಾಜೀನಾಮೆಗೆ ನಿರ್ಧರಿಸಿದ್ದೇನೆ. ಮುಖ್ಯಮಂತ್ರಿ ಸೂಚಿಸಿದರೆ, ಬೆಂಗಳೂರಿಗೆ ತೆರಳಿ ರಾಜೀನಾಮೆ ನೀಡುತ್ತೇನೆಂದರು.

ನಿಗಮದ ಅಧ್ಯಕ್ಷನಾದ ನಂತರ ನಾನು ಯಾರ ಬಳಿಯೂ ಕಮೀಷನ್ ಪಡೆದಿಲ್ಲ. ನಿಗಮದ ಕಚೇರಿಯಲ್ಲಿಯೇ ವಿಡಿಯೊ ಚಿತ್ರೀಕರಿಸಿರುವುದು ಅಚ್ಚರಿ ಮೂಡಿಸಿದೆ. ಈ ಪಿತೂರಿಯಲ್ಲಿ ನಿಗಮದ ಅಧಿಕಾರಿಗಳ ಪಾತ್ರವನ್ನು ಅಲ್ಲಗಳೆಯಲಾಗದು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ವಾಸ್ತವ ಏನೆಂಬುದನ್ನು ಮನವರಿಕೆ ಮಾಡಿಕೊಟ್ಟು ತನಿಖೆ ನಡೆಸುವಂತೆ ಮನವಿ ಮಾಡಲಿದ್ದೇನೆ ಎಂದು ಅವರು ತಿಳಿಸಿದರು.

ಈ ಹಿಂದೆ ಭೋವಿ ಅಭಿವೃದ್ಧಿ ನಿಗಮದಲ್ಲಿ ಬಹು ದೊಡ್ಡ ಹಗರಣ ನಡೆದಿತ್ತು. ಅಧ್ಯಕ್ಷ ಸ್ಥಾನ ಮುಳ್ಳಿನ ಕುರ್ಚಿ ಎಂಬ ಅರಿವು ನನಗಿತ್ತು. ಭ್ರಷ್ಟಾಚಾರ ತಡೆಯಲು ಬಿಗಿ ಕ್ರಮಗಳನ್ನು ಅನುಸರಿಸಿದ್ದೆ. ಈ ಬೆಳವಣಿಗೆ ಸಹಿಸಲಾಗದೆ ಕೆಲವರು ಸಂಚು ರೂಪಿಸಿದ್ದಾರೆ ಎಂದರು.

## ಸೆ.8 ರಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಸೆ.08 ರಂದು ಆಚರಿಸಲಾಗುತ್ತಿರುವ ಅಂಗವಾಗಿ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆವರಣದಲ್ಲಿ ಸದರಿ ದಿನಾಂಕದಂದು ಬೆಳಿಗ್ಗೆ 09 ಗಂಟೆಗೆ ಸಾಕ್ಷರತಾ ಧ್ವಜಾರೋಹಣಾ ಕಾರ್ಯಕ್ರಮವಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಸನ ಇಲ್ಲಿ ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯ ಮಹತ್ವ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾರನಹಳ್ಳಿಯಲ್ಲಿ ಜೇನು ಕೃಷಿಯ ಜಾಗೃತಿ

• ಪ್ರಜೋದಯ ವರದಿ

**ಹಾಸನ:** ದುದ್ದ ಹೊಬಳಿಯ ಹಾರನಹಳ್ಳಿ ಗ್ರಾಮದಲ್ಲಿ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಜೇನು ಸಾಕಾಣಿಕೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಡಾ. ಸೌಮ್ಯ.ಇ (ಸಹ ಪ್ರಾಧ್ಯಾಪಕಿ, ಕೃಷಿ ಕೀಟಶಾಸ್ತ್ರ ವಿಭಾಗ) ಅವರು ಜೇನು ಸಾಕಾಣಿಕೆಯ ಆರ್ಥಿಕ ಮಹತ್ವ, ಜೇನು ಗೂಡುಗಳ ನಿರ್ವಹಣೆ, ವಿವಿಧ ಜೇನು ಹುಳ ಜಾತಿಗಳು, ರೋಗ-ಕೀಟ ನಿಯಂತ್ರಣ ಹಾಗೂ ಮಧು ಉತ್ಪಾದನೆ ವಿಧಾನಗಳು ಕುರಿತು ರೈತರಿಗೆ ವಿವರಿಸಿದರು. ಜೇನು ಸಾಕಾಣಿಕೆ ಮೂಲಕ ಪರ್ಯಾಯ ಆದಾಯ ವೃದ್ಧಿ, ಬೆಳೆಗಳಲ್ಲಿ ಪರಾಗ ಸ್ಪರ್ಶದ ಮೂಲಕ ಉತ್ಪಾದನೆ ಹೆಚ್ಚಳ ಹಾಗೂ ಗ್ರಾಮೀಣ ಉದ್ಯಮಾಭಿವೃದ್ಧಿ ಸಾಧ್ಯತೆಗಳ ಬಗ್ಗೆ ವಿಶೇಷವಾಗಿ ಚರ್ಚಿಸಲಾಯಿತು.

ಈ ಕಾರ್ಯಕ್ರಮವು ರೈತರಿಗೆ ಜೇನು ಸಾಕಾಣಿಕೆಯನ್ನು ಪೂರಕ ಉದ್ಯಮವಾಗಿ ಅಳವಡಿಸಿಕೊಳ್ಳಲು ಉತ್ತೇಜನ ನೀಡಿತು.

## ರೈತ ಆತ್ಮಹತ್ಯೆ: ತಹಸೀಲ್ದಾರ್ ಭೇಟಿ, ಪರಿಹಾರದ ಭರವಸೆ

• ಪ್ರಜೋದಯ ವರದಿ

**ಅರಕಲಗೂಡು:** ಸಾಲಬಾಧೆಯಿಂದ ಕೀಟನಾಶಕ ಸೇವನೆ ಮಾಡಿ ಅತ್ಮಹತ್ಯೆ ಮಾಡಿಕೊಂಡಿದ್ದ ತಾಲ್ಲೂಕಿನ ಹಂಪಾಪುರ ಗ್ರಾಮದ ಮೃತ ರೈತ ಜಯಣ್ಣ ಅವರ ಮನೆಗೆ ಬುಧವಾರ ಅಧಿಕಾರಿಗಳೊಂದಿಗೆ ತಹಸೀಲ್ದಾರ್ ಸೌಮ್ಯ ಅವರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೂಲಸೌಕರ್ಯದಿಂದ ವಂಚನೆಗೆ ಒಳಗಾಗಿ ಕೃಷಿ ಜಮೀನಿನ ಬಳಿ ಸಂಕಷ್ಟದಲ್ಲಿ ಈ ಕುಟುಂಬವಿದ್ದು, ಸ್ಥಳೀಯ ಗ್ರಾಪಂ ವತಿಯಿಂದ ಮನೆ ಅಥವಾ ಮತ್ಯಾವ ಸವಲತ್ತುಗಳನ್ನು ಕಲ್ಪಿಸಿಲ್ಲದಿರುವುದನ್ನು ಕಂಡು ಅವರು ಬೇಸರ ವ್ಯಕ್ತಪಡಿಸಿದರಲ್ಲದೆ, ಕೂಡಲೇ ಗ್ರಾಪಂ ಆಡಳಿತ ವತಿಯಿಂದ ಮನೆ ನಿಗದಿತ ಅವಧಿಯೊಳಗೆ ಕಲ್ಪಿಸುವ ಸಲುವಾಗಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗುವುದು. ತ್ವರಿತವಾಗಿ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಗಂಗೂರು ಗ್ರಾಪಂ ಪಿಡಿಒಗೆ ತಿಳಿಸಲಾಗಿದೆ. ಮನೆಯ ಯಜಮಾನ ಸಾಲಬಾಧೆಯಿಂದ ಸಾವನಪ್ಪಿದ್ದಾನೆ. ಹೆಂಡತಿ, ಎರಡು ಮಕ್ಕಳು ಸಂಕಷ್ಟದಲ್ಲಿರುವ ಕುರಿತು ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳ ಪರಿಶೀಲನೆ ಮಾಡಿದ್ದೇನೆ. ನೊಂದ ಕುಟುಂಬದೊಂದಿಗೆ ತಾಲೂಕು ಆಡಳಿತ ಸ್ಪಂದಿಸಲಿದೆ ಎಂದು ತಹಸೀಲ್ದಾರ್ ಸೌಮ್ಯ ಅವರು ಭರವಸೆ ನೀಡಿದರು.



ಕಳೆದ ಎರಡು ವರ್ಷಗಳ ಹಿಂದೆ ವಾಸದ ಮನೆ ಅಕಾಲಿಕ ಮಳೆಯಿಂದ ಬಿದ್ದುಹೋಗಿದೆ. ಬಿದ್ದುಹೋದ ಮನೆಯ ದಾಖಲಾತಿ ಮೃತ ಜಯಣ್ಣನ ಹೆಸರಿನಲ್ಲಿರದ ಕಾರಣ ಮನೆ ಪರಿಹಾರ ಸಿಕ್ಕಿಲ್ಲ. ಕೂಡಲೇ ಗ್ರಾಪಂ ವತಿಯಿಂದ ಮನೆ ನಿರ್ಮಿಸಿಕೊಡಲು ಮುಂದಾಗಬೇಕಿದೆ ಎಂದು ಗ್ರಾಮದ ಮುಖಂಡ ಹಾಗೂ ಮಾಜಿ ಕೆಡಿಪಿ ಸದಸ್ಯ ಹಂಪಾಪುರ ಮಹೇಶ್ ಒತ್ತಾಯಿಸಿದರು.

ಇತರೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ದೂರವಾಣಿ ಮೂಲಕ ಪಿಡಿಒ ಅವರಿಗೆ ಸೂಚನೆ ನೀಡಿದರು.

ಮೃತ ರೈತ ಜಯಣ್ಣನ ಕುಟುಂಬಕ್ಕೆ ಸರಕಾರದಿಂದ ಸಿಗುವ ಆರ್ಥಿಕ ಪರಿಹಾರ ಮತ್ತು ಇತರೆ ಸವಲತ್ತುಗಳನ್ನು

ಈ ಸಂದರ್ಭದಲ್ಲಿ ಗ್ರೇಡ್-2 ತಹಸೀಲ್ದಾರ್ ಸ್ವಾಮಿ, ಕಂದಾಯ ಅಧಿಕಾರಿ ಭಾಸ್ಕರ್ ಹಾಜರಿದ್ದರು.

## ಕ್ರೀಡಾಕೂಟ: ವಿಜೇತರಿಗೆ ಬಹುಮಾನ ವಿತರಣೆ

• ಪ್ರಜೋದಯ ವರದಿ

**ಅರಕಲಗೂಡು:** ಕ್ರೀಡೆಗಳಲ್ಲಿ ಸೋಲು-ಗೆಲುವು ಸಹಜ. ಆದರೆ, ಭಾಗವಹಿಸುವಿಕೆ ಅತೀ ಮುಖ್ಯವಾಗಿದೆ. ಶೈಕ್ಷಣಿಕ ಹಂತದಲ್ಲಿ ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹೊನ್ನವಳ್ಳಿ ಗ್ರಾ.ಪಂ. ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.



ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಬುಧವಾರ ಆಯೋಜನೆ ಮಾಡಲಾಗಿದ್ದ ಕಸಬಾ ಹೋಬಳಿ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮಾಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಹೆಚ್ಚು ಸಮಯವನ್ನು ಟಿವಿ ನೋಡುವಲ್ಲಿ ಕಳೆಯಬಾರದು. ದಿನದಲ್ಲಿ ಎರಡು ಗಂಟೆಯಾದರೂ ವ್ಯಾಯಾಮ, ತಮಗೆ ಇಷ್ಟವಾದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಅತ್ಯವಶ್ಯವಾಗಿದೆ. ಇದು ಕ್ರೀಡೆಯಲ್ಲಿ ಸಾಧನೆ ಮಾಡಲು ಸಹಕಾರಿಯಾಗಲಿದೆ ಎಂದು ಸಲಹೆ ನೀಡಿದರು.

ಕ್ರೀಡಾಕೂಟದ ಬಾಲಕರ ಸಮಗ್ರ ಪ್ರಶಸ್ತಿಯನ್ನು ಶಾಂತಿನೀಕೇತನ ಶಾಲೆಯ ತಂಡ ಹಾಗೂ ಬಾಲಕಿಯರ ವಿಭಾಗದ ಸಮಗ್ರ ಪ್ರಶಸ್ತಿಯನ್ನು ಕ್ರಿಸ್ತಜ್ಯೋತಿ ಶಾಲೆಯ ತಂಡವು ಪಡೆದುಕೊಂಡಿತು.

ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಸವರಾಜು, ಸದಸ್ಯರಾದ ಸಣ್ಣದೇವಯ್ಯ, ಯೋಗೇಶ್, ಜಯರಾಮ್, ರವಿಕುಮಾರ್, ಉಪ ಪ್ರಾಂಶುಪಾಲ ಬೋರಣ್ಣಗೌಡ, ಟಿಪಿಒ ನಿಂಗಯ್ಯ, ದೈಹಿಕ ಶಿಕ್ಷಕ ಸಂಜೀವ್‌ಕುಮಾರ್, ಸಹ ಶಿಕ್ಷಕರು ಭಾಗವಹಿಸಿದ್ದರು.

## ದಾರ್ಶನಿಕರ ತತ್ವನೀತಿ ಅಳವಡಿಸಿಕೊಂಡರೆ ಯಶಸ್ಸು

• ಪ್ರಜೋದಯ ವರದಿ

**ಹಾಸನ:** ಭಕ್ತಿ ಭಾವನೆಯಿಂದ ವಚನ ಗಾಯನದ ದಾರ್ಶನಿಕರ ಹಾಗೂ ಕನಕದಾಸರ ತತ್ವಪದಗಳು, ಭಕ್ತಿ ಪರಂಪರೆ ಸಂಸ್ಕೃತಿ ಪರಂಪರೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಮಾತ್ರ ನಮ್ಮ ಜೀವನ ಯಶಸ್ಸುಗೊಳ್ಳುವುದು ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರದಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅಭಿಪ್ರಾಯಪಟ್ಟರು.



ನಗರದ ಎ.ವಿ.ಕೆ. ಕಾಲೇಜು ಸಭಾಂಗಣದಲ್ಲಿ ನಡೆದ ಸಂತಕವಿ ಕನಕದಾಸ ಮತ್ತು ತತ್ವಪದಗಳ ಅಧ್ಯಯನ ಕೇಂದ್ರ ಬೆಂಗಳೂರು ಹಾಗೂ ಐ.ಕ್ಯೂ. ಎ. ಸಿ. ಕನ್ನಡ ವಿಭಾಗ ಎವಿಕೆ ಕಾಲೇಜು ವತಿಯಿಂದ ಏರ್ಪಡಿಸಲಾಗಿದ್ದ ಕರ್ನಾಟಕ ಭಕ್ತಿ ಪರಂಪರೆ ಒಂದು ದಿನದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಅನೇಕ ಸಾಹಿತಿಗಳು, ವಚನಗಾರರ, ತತ್ವಪದಕಾರರ, ವಿಚಾರಗಳನ್ನು ಸಾಹಿತಿಗಳು ಉಳಿಸಿ ಬೆಳಸುವ ಕೆಲಸ ಅಗುತ್ತಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ದಾರ್ಶನಿಕರ ಅಚಾರ -ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸಂತಕವಿ ಕನಕದಾಸ ತತ್ವಪದ ಅಧ್ಯಯನ ಕೇಂದ್ರದ ರಾಜ್ಯ ಅಧ್ಯಕ್ಷ ಕಾ.ತ.ಚಿಕ್ಕಣ್ಣ ಅವರು ಮಾತನಾಡಿ, ಇಂದಿನ ಯುವ ಜನಾಂಗದವರಿಗೆ ಹಿಂದಿನ ಸಂತರ ವಿಚಾರ ಅಚಾರ - ವಿಚಾರಗಳನ್ನು ತಿಳಿಸುವ ಉತ್ತಮ ಕೆಲಸ ಮಾಡಲಾಗುತ್ತಿದೆ. ಕನಕದಾಸರ ಅಧ್ಯಯನ ಪೀಠವು ನಮ್ಮ ಸಂಸ್ಕೃತಿಗೆ ಹೆಚ್ಚಿನ ಮಹತ್ವ ನೀಡಿದೆ. ನಾಡು ನುಡಿಗಳು, ಸಂತರು ಮಾಡಿದ ಕೆಲಸಗಳನ್ನು ಪ್ರಚಾರ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಎ.ವಿ.ಕೆ. ಕಾಲೇಜು ಪ್ರಾಂಶುಪಾಲ ಡಾ. ಸೀ.ಚ.ಯತೀಶ್ವರ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ವ್ಯಾಸಂಗದ ಜೊತೆಗೆ ಅನೇಕ ದಾರ್ಶನಿಕರ ವಿಚಾರಗಳನ್ನು ಇಂತಹ ವಿಚಾರ ಸಂಕಿರಣ ಹಾಗೂ ವಿಚಾರ ಮಂಥನಗಳಿಂದ ಪ್ರಯೋಜನವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂತ ಕನಕದಾಸ ಮತ್ತು ತತ್ವಪದಗಳ ಅಧ್ಯಯನ ಕೇಂದ್ರದ ಕಾರ್ಯದರ್ಶಿ ಕರಿಯಪ್ಪ, ಖಜಾಂಚಿ ಡಾ. ಚಕ್ಕರೆ ಶಿವಶಂಕರ್, ಡಾ. ಪಾರ್ವತಿ, ಡಾ. ಜೆ.ಪುಷ್ಪಲತಾ, ಡಾ. ಶಾಂತರಾಜ್, ಮತ್ತಿತರರು ಉಪಸ್ಥಿತರಿದ್ದರು.

## ದೇಶಪಾಂಡೆ ಧಿಮಾಕಿನ ಉತ್ತರ; ವ್ಯಾಪಕ ಆಕ್ರೋಶ

• ಪ್ರಜೋದಯ ವರದಿ

**ಕಾರವಾರ:** ಮಹಿಳಾ ಪತ್ರಕರ್ತೆಯೋರ್ವರ ಪ್ರಶ್ನೆಗೆ ಉಡಾಫೆಯ ಉತ್ತರ ನೀಡುವ ಮೂಲಕ, ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಹಳಿಯಾಳ ಶಾಸಕ ಆರ್‌ವಿ ದೇಶಪಾಂಡೆ ಭಾರೀ ವಿವಾದ ಸೃಷ್ಟಿಸಿದ್ದಾರೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಡಿಕೆ ವಿಷಯವಾಗಿ ಪತ್ರಕರ್ತೆಯೊಬ್ಬರು ಪ್ರಶ್ನೆ ಮಾಡಿದ್ದಕ್ಕೆ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಇಲ್ಲಿ ಜನರ ಪರಿಸ್ಥಿತಿ ಗಮನಹರಿಸಿ, ನಿಮ್ಮ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿಮ್ಮ ಅವಧಿಯಲ್ಲಿ ಆಗುತ್ತಾ ಎಂದು ಪ್ರಶ್ನಿಸಿದ್ದರು. ಇದಕ್ಕೆ ಶಾಸಕ ಆರ್.ವಿ.ದೇಶಪಾಂಡೆ 'ನಿಂದೇನಾದ್ರೂ ಹೆರಿಗೆ ಮಾಡಿಸಬೇಕಾ ಹೇಳು.. ಮಾಡಿಸ್ತೀನಿ' ಎಂದು ಅವಹೇಳನಕಾರಿ ಹೇಳಿಕೆ ನೀಡಿ, ಅಪಮಾನ ಮಾಡಿದ್ದಾರೆ.

## ಅವಧಿ ವಿಸ್ತರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಗ್ರಾಮೀಣ ಪ್ರದೇಶದ ನಿರುದ್ಯೋಗಿ ವೃತ್ತಿನಿರತ ಕುಶಲಕರ್ಮಿಗಳಿಗೆ 2025-26 ನೇ ಸಾಲಿನಲ್ಲಿ ಸುಧಾರಿತ ಉಪಕರಣಗಳ ವಿತರಣೆ ಯೋಜನೆಯಡಿ ಗ್ರಾಮೀಣ ಕುಶಲಕರ್ಮಿಗಳಿಗೆ ಮರಗೆಲಸ, ಗಾರೆ ಕೆಲಸ, ಕ್ಷೌರಿಕ, ದೋಬಿ, ಎಲೆಕ್ಟ್ರಿಕಲ್ ರಿಪೇರಿ, ಬೋರ್‌ಬೆಲ್ ರಿಪೇರಿ/ಮೋಟರ್ ವೈಂಡಿಂಗ್ ಉಪಕರಣಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಉಪನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿ ಕಟ್ಟಡ, ಡೈರಿ ಸರ್ಕಲ್, ಹಾಸನ. ರವರ ಕಚೇರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಕೊನೆಯ ದಿನಾಂಕ ಸೆ.12 ಆಗಿದ್ದು ಅರ್ಜಿಗಳನ್ನು ಅಷ್ಟರೊಳಗೆ ಸಲ್ಲಿಸುವಂತೆ ಕೋರಲಾಗಿದೆ.

## ಧರ್ಮಕ್ಷೇತ್ರಗಳಿಗೆ ಅ.2 ರಿಂದ ಶಿವ ಸಾಯಿ ಯಾತ್ರೆ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಭಾರತ್ ಗೌರವ್ ರೈಲು ಸಂಚಾರವನ್ನು ಮೊತ್ತಮೊದಲಿಗೆ ಆರಂಭಿಸಿದ ಸೌತ್ ಸ್ಟಾರ್ ರೈಲು ಕಂಪನಿಯು ನವ ಬೃಂದಾವನ ಹಾಗೂ ಶ್ರೀಶೈಲ ಸೇರಿದಂತೆ 8 ಧರ್ಮಕ್ಷೇತ್ರಗಳಿಗೆ ಶಿವ ಸಾಯಿ ಯಾತ್ರೆ ಎಂಬ ಹೊಸ ಪ್ರವಾಸ ಕಾರ್ಯಕ್ರಮ ರೂಪಿಸಿದ್ದು, ಅ. 2ರಿಂದ ಈ ರೈಲು ಸಂಚಾರ ಆರಂಭಿಸಿದೆ.

ಪ್ರವಾಸಿಗರು ರೈಲಿನಲ್ಲಿ ತೆರಳಿ ನವ ಬೃಂದಾವನ, ಮಂತ್ರಾಲಯ, ಪಂಡರಿಪುರ, ಶಿರಡಿ, ತ್ರಯಂಬಕೇಶ್ವರ, ಭೀಮಾಶಂಕರ, ಗುಷ್ಣೇಶ್ವರ ಹಾಗೂ ಶ್ರೀಶೈಲಂ ಧರ್ಮಕ್ಷೇತ್ರಗಳ ದರ್ಶನ ಮಾಡಬಹುದು. ಒಟ್ಟು 11 ದಿನಗಳ ಈ ಪ್ರವಾಸವು ಎಲ್ಲೋರಾ ಗುಹೆಗಳ ಭೇಟಿಯನ್ನೂ ಒಳಗೊಂಡಿದೆ.



ರೈಲು ಬಂಗಾರಪೇಟೆಯಿಂದ ಹೊರಡಲಿದ್ದು, ಪ್ರವಾಸಿಗರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಬೆಂಗಳೂರಿನ ವೈಟ್ ಫೀಲ್ಡ್, ಯಲಹಂಕ, ಧರ್ಮಾವರಂ, ಅನಂತಪುರ, ಬಳ್ಳಾರಿ, ಹೊಸಪೇಟೆಯಲ್ಲೂ ರೈಲು ಹತ್ತಬಹುದು. ಆನ್ ಬೋರ್ಡ್ ಘೋಷಣಾ ವ್ಯವಸ್ಥೆ, ನಿಯೋಜಿತ ಕೋಚ್ ಭದ್ರತಾ ಸಿಬ್ಬಂದಿ, ಟೂರ್ ಮ್ಯಾನೇಜರ್ ಗಳು, ಪ್ರಯಾಣ ವಿಮೆ, ಹೋಟೆಲ್ ವ್ಯವಸ್ಥೆ, ಸೈಟ್ ಸೀಯಿಂಗ್, ಅನಿಯಮಿತ ದಕ್ಷಿಣ ಭಾರತದ ಊಟ ಇತ್ಯಾದಿ ಸೌಲಭ್ಯಗಳನ್ನು ಇದು ಒಳಗೊಂಡಿರುತ್ತದೆ. ಈ ಪ್ರವಾಸಕ್ಕೆ ಎಲ್ ಟಿ ಸಿ/ಎಲ್ ಎಫ್ ಸಿ ಅನ್ವಯವಾಗಲಿದ್ದು, ಭಾರತೀಯ ರೈಲ್ವೆಯ ಶೇಕಡಾ 33ರಷ್ಟು ಸಹಾಯಧನ ಲಭ್ಯವಾಗಲಿದೆ ಎಂದು ವಿಘ್ನೇಶ್ ಅವರು ವಿವರಿಸಿದ್ದಾರೆ.

ಆಸಕ್ತರು 93550 21516 ಸಂಪರ್ಕಿಸಿ ಅಥವಾ ಆನ್‌ಲೈನ್‌ನಲ್ಲಿ www.tourtimes.in ಮೂಲಕ ಬುಕಿಂಗ್ ಮಾಡಬಹುದಾಗಿದೆ.

ದೇಶದ ಮುಂಚೂಣಿ ಪ್ರವಾಸಿ ರೈಲು ನಿರ್ವಾಹಕ ಸಂಸ್ಥೆ ಟೂರ್ ಟೈಮ್ಸ್ ಸಹಭಾಗಿತ್ವದಲ್ಲಿ ಈ ಯೋಜನೆ ರೂಪಿಸಲಾಗಿದೆ ಎಂದು ಸೌತ್ ಸ್ಟಾರ್‌ನ ಪ್ರಾಡಕ್ಟ್ ಡೈರೆಕ್ಟರ್ ವಿಘ್ನೇಶ್ ತಿಳಿಸಿದ್ದಾರೆ. ಮಾಹಿತಿಗೆ 9500078284 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಲಾಗಿದೆ.

## ದಂಡ ಪಾವತಿಗೆ ಅವಕಾಶ

• ಪ್ರಜೋದಯ ವರದಿ

ಹಾಸನ: ಪೊಲೀಸ್ ಇಲಾಖೆಯ ಸಂಚಾರಿ ಇ- ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡ 50 ರಷ್ಟು ರಿಯಾಯಿತಿ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಆಯುಕ್ತರು, ಸಾರಿಗೆ ಹಾಗೂ ರಸ್ತೆ ಸುರಕ್ಷತೆ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ ಆ.23ರಿಂದ ಸೆ.12 ರ ವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯಿಸುವಂತೆ ಸೆ.12 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ. 50 ರಷ್ಟು ರಿಯಾಯಿತಿ ನೀಡಿ ಆದೇಶಿಸಿರುತ್ತದೆ.

## ಶಾಸಕ ಸುರೇಶ್ ಜನ್ಮದಿನ: ರಕ್ತದಾನ ಶಿಬಿರ

• ಪ್ರಜೋದಯ ವರದಿ

**ಬೇಲೂರು:** ಶಾಸಕ ಹೆಚ್.ಕೆ.ಸುರೇಶ್ ಅವರ ಜನ್ಮ ದಿನದ ಅಂಗವಾಗಿ ತಾಲ್ಲೂಕು ಬಿಜೆಪಿ ಮಂಡಲ ಮತ್ತು ಹೆಚ್.ಕೆ.ಸುರೇಶ್ ಅಭಿಮಾನಿಗಳಿಂದ ವಿವಿಧ ಸೇವಾ ಚಟುವಟಿಕೆಗಳ ಜೊತೆಗೆ ಅಭಿಮಾನಿಗಳು ಸ್ವಯಂ ಪೇರಿತ ರಕ್ತದಾನ ಮಾಡಿದರು.

ಜನ್ಮದಿನದ ಹಿನ್ನೆಲೆಯಲ್ಲಿ ವಿಧಾನಸಭಾ ಕ್ಷೇತ್ರದ ಎಲ್ಲಾ ಶಾಲೆಗಳ ಮಕ್ಕಳಿಗೆ ಲೇಖನಿ ಸಾಮಾಗ್ರಿಗಳು ಮತ್ತು ವಿವಿಧ ಸೌಲಭ್ಯಗಳನ್ನು ವಿತರಿಸಲಾಯಿತು. ವೈಡಿಡಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಏರ್ಪಡಿಲಾಗಿತ್ತು. ತಾಲ್ಲೂಕು ಪಂಚಾಯಿತಿ ಮುಂಭಾಗದಲ್ಲಿ ಕೂಡ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ನಡೆಸಿ ತಮ್ಮ ನಾಯಕರ ಜನ್ಮದಿನದಕ್ಕೆ ಶುಭಾಶಯಗಳನ್ನು ಕೋರಿದರು.



ತಾಲ್ಲೂಕು ಬಿಜೆಪಿ ಅಧ್ಯಕ್ಷ ಕೌರಿ ಸಂಜು ಮಾತನಾಡಿ, ದುಂದು ವೆಚ್ಚ, ಅದ್ದೂರಿಗೆ ಒತ್ತು ನೀಡದೆ ಬಿಜೆಪಿ ಮಂಡಲದ ವತಿಯಿಂದ ಕ್ಷೇತ್ರದಲ್ಲಿನ ಕಾರ್ಯಕರ್ತರು ಸ್ವಯಂ ಪ್ರೇರಿತವಾಗಿ ತಮ್ಮ ತಮ್ಮ ಶಾಲೆಗಳಿಗೆ ಉಚಿತ ಲೇಖನಿ ಸಾಮಾಗ್ರಿಗಳನ್ನು ಈಗಾಗಲೇ ನೀಡಿದ್ದಾರೆ. ಅಲ್ಲದೆ ದಾನಗಳಲ್ಲಿ ಶ್ರೇಷ್ಠ ದಾನ ರಕ್ತದಾನ ಎಂಬ ನಿಟ್ಟಿನಲ್ಲಿ ಜನ್ಮದಿನದ ಅರ್ಥಪೂರ್ಣತೆಗೆ ಸಾಕ್ಷಿಯಾಗಬೇಕು ಎಂಬ ನಿಟ್ಟಿನಲ್ಲಿ ವೈಡಿಡಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಾಗೂ ಪಟ್ಟಣದ ತಾಲ್ಲೂಕು ಪಂಚಾಯಿತಿ ಮುಂದೆ ನೂರಾರು ಅಭಿಮಾನಿಗಳು ರಕ್ತದಾನ ಮಾಡಿದ್ದಾರೆ ಎಂದರು.

ತಾಲ್ಲೂಕು ವೀರಶೈವ ಲಿಂಗಾಯಿತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಎ. ಎಸ್.ಬಸವರಾಜು, ಯುವ ಘಟಕದ ಅಧ್ಯಕ್ಷ ಹಳೇಬೀಡು ಚೇತನ್, ಬಿಜೆಪಿ ನಗರಾಧ್ಯಕ್ಷ ವಿಜಯ್, ಶಾಸಕರ ಅಪ್ತ ಕಾರ್ಯದರ್ಶಿ ನಿಖಿಲ್, ಅಭಿಮಾನಿಗಳಾದ ಪ್ರಸನ್ನ ಇನ್ನಿತರರಿದ್ದರು.

### ಆಪರೇಷನ್ ಸಿಂಧೂರ್ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಹುಟ್ಟಡಗಿಸಿದ್ದ ರಷ್ಯಾ ನಿರ್ಮಿತ ಏರ್ ಡಿಫೆನ್ಸ್ ಸಿಸ್ಟಮ್

# ಭಾರತದ ಬತ್ತಳಿಕೆಗೆ ಮತ್ತಷ್ಟು-400 ವಾಯು ರಕ್ಷಣಾ ವ್ಯವಸ್ಥೆ

• ಪ್ರಜೋದಯ ವರದಿ

**ನವದೆಹಲಿ:** ಇತ್ತೀಚೆಗೆ ನಡೆದ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಹುಟ್ಟಡಗಿಸಿದ್ದ ರಷ್ಯಾ ನಿರ್ಮಿತ ಏರ್ ಡಿಫೆನ್ಸ್ ಸಿಸ್ಟಮ್ -400 ನ ಮತ್ತಷ್ಟು ಘಟಕಗಳನ್ನು ಭಾರತಕ್ಕೆ ನೀಡುವುದಾಗಿ ರಷ್ಯಾ ಘೋಷಣೆ ಮಾಡಿದೆ.

ಪಾಕಿಸ್ತಾನದ ವಿರುದ್ಧದ ಯುದ್ಧದ ತನ್ನ ಚೊಚ್ಚಲ ಯುದ್ಧ ಸಮಯದಲ್ಲಿ ಭಾರತಕ್ಕೆ ವಾಯು ರಕ್ಷಣಾ ವ್ಯವಸ್ಥೆಯಲ್ಲಿ ಅಭೇದ್ಯ ಗುರಾಣಿಯಾಗಿ ಹೊರಹೊಮ್ಮಿದ ಎಸ್ 400 ವಾಯು ರಕ್ಷಣಾ ವ್ಯವಸ್ಥೆ ಮತ್ತೆ ಸುದ್ದಿಗೆ ಗ್ರಾಸವಾಗಿದ್ದು ಭಾರತಕ್ಕೆ ಮತ್ತಷ್ಟು ಎಸ್ 400 ವಾಯುರಕ್ಷಣಾ ವ್ಯವಸ್ಥೆಗಳನ್ನು ನೀಡುವುದಾಗಿ ರಷ್ಯಾ ಘೋಷಣೆ ಮಾಡಿದೆ.

ಈಗಾಗಲೇ ಭಾರತ ನೀಡಿರುವ ಆರ್ಡರ್ ಅಲ್ಲದೇ ಹೆಚ್ಚುವರಿ ಘಟಕಗಳನ್ನು ಮಾರಾಟ ಮಾಡಲು ರಷ್ಯಾ ಉತ್ಸುಕತೆ ತೋರಿದೆ ಎಂದು ಹೇಳಲಾಗಿದೆ. ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಈ ಎಸ್ 400 ಕ್ಷಿಪಣಿ ವ್ಯವಸ್ಥೆಯ ವಿತರಣೆಯನ್ನು ತ್ವರಿತಗೊಳಿಸಲು ರಷ್ಯಾ ಮತ್ತು ಭಾರತದ ನಡುವೆ ಮಾತುಕತೆಗಳು ನಡೆಯುತ್ತಿವೆ ಎನ್ನಲಾಗಿದೆ.

ಮೂಲಗಳ ಪ್ರಕಾರ, ಎಸ್ 400ನ ಒಂದು ಘಟಕವನ್ನುಮುಂಬರುವ 2026 ರ ವೇಳೆಗೆ ಮತ್ತು ಇನ್ನೊಂದು ಘಟಕವನ್ನು 2027 ರ ವೇಳೆಗೆ ತಲುಪಿಸುವ ನಿರೀಕ್ಷೆಯಿದೆ. 2018 ರಲ್ಲಿ ಭಾರತವು ಆರ್ಡರ್ ಮಾಡಿದ್ದ ಐದು ಘಟಕಗಳ ಪೈಕಿ ಈಗಾಗಲೇ ರಷ್ಯಾ 3 ಘಟಕಗಳನ್ನು ಭಾರತಕ್ಕೆ ನೀಡಿದ್ದು, ಬಾಕಿ ಇರುವ 2 ಘಟಕಗಳನ್ನು 2026 ಮತ್ತು 2027ರಲ್ಲಿ ನೀಡಲಿದೆ ಎಂದು ಹೇಳಲಾಗಿದೆ.

ಕಳೆದ ವರ್ಷ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ರಷ್ಯಾ ಭೇಟಿಯ ಸಮಯದಲ್ಲಿ ಮತ್ತು ಇತ್ತೀಚೆಗೆ ನಡೆದ ಭಾರತ-ರಷ್ಯಾ ದ್ವಿಪಕ್ಷೀಯ ಸಭೆಯಲ್ಲಿ ವಿತರಣೆಯಲ್ಲಿನ ವಿಳಂಬವನ್ನು ಚರ್ಚೆ ಮಾಡಿದ್ದರು.

**2 ಅಲ್ಲ.. ಮತ್ತಷ್ಟು ಘಟಕಗಳು ಬರಲಿವೆ!**

ಇನ್ನು ರಷ್ಯಾ ಭಾರತಕ್ಕೆ ಬಾಕಿ ನೀಡಬೇಕಿರುವ 2 ಎಸ್ 400 ಘಟಕಗಳು ಮಾತ್ರವಲ್ಲದೇ ಇನ್ನಷ್ಟು ಘಟಕಗಳನ್ನು ಭಾರತಕ್ಕೆ ನೀಡಲು ಉತ್ಸುಕತೆ ತೋರಿದೆ. ಈ ಕುರಿತು ಮಾತನಾಡಿರುವ ರಷ್ಯಾದ ಫೆಡರಲ್ ಸರ್ವಿಸ್ ಫಾರ್ ಮಿಲಿಟರಿ-ಟೆಕ್ನಿಕಲ್ ಕೋಆಪರೇಷನ್ ನ ಮುಖ್ಯಸ್ಥ ಡಿಮಿಟ್ರಿ ಶುಗಾಯೇವ್ ಅವರು ರಷ್ಯಾ ಮಾಧ್ಯಮದಲ್ಲಿ ಮಾತನಾಡಿದ್ದಾರೆ.



ಭಾರತವು ಈಗಾಗಲೇ ನಮ್ಮ -400 ವ್ಯವಸ್ಥೆಯನ್ನು ಹೊಂದಿದೆ. ಈ ಕ್ಷೇತ್ರದಲ್ಲಿಯೂ ನಮ್ಮ ಸಹಕಾರವನ್ನು ವಿಸ್ತರಿಸುವ ಸಾಮರ್ಥ್ಯವಿದೆ. ಅಂದರೆ ಹೊಸ ವಿತರಣೆಗಳು. ಈಗ, ನಾವು ಮಾತುಕತೆ ಹಂತದಲ್ಲಿದ್ದೇವೆ' ಎಂದು ಹೇಳಿದ್ದಾರೆ.

**ಮೋದಿ ಹೇಳಿದ್ದೇನು?**

ಇನ್ನು ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ 'ಸುದರ್ಶನ ಚಕ್ರ' ಅಸ್ತ್ರದ ಕುರಿತು ಉಲ್ಲೇಖಿಸಿದ್ದರು. ದೇಶಕ್ಕೆ ಬಹುಪದರದ ಚೌಕಟ್ಟು, ದೇಶದ ಮೇಲೆ ರಕ್ಷಣಾತ್ಮಕ ಹೊದಿಕೆಯನ್ನು ಒದಗಿಸಲು ಸುಧಾರಿತ ಕಣ್ಗಾವಲು ಮತ್ತು ಸೈಬರ್ ರಕ್ಷಣೆಯನ್ನು ಈ ಸುದರ್ಶನ ಚಕ್ರ ಯೋಜನೆ ಸಂಯೋಜಿಸುತ್ತದೆ. ಇದು ಇಸ್ರೇಲ್‌ನ ಐರನ್ ಡೋಮ್‌ನಂತೆಯೇ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಿದ್ದರು. ಇದರ ಹೊರತಾಗಿಯೂ ಭಾರತ ರಷ್ಯಾದ ಮತ್ತಷ್ಟು -400 ವ್ಯವಸ್ಥೆಗಳನ್ನು ಖರೀದಿಸಲು ಯೋಜಿಸುತ್ತಿದೆ.

ಭಾರತದ ವಾಯುಸೇನಾ ಮುಖ್ಯಸ್ಥ ಮಾರ್ಷಲ್ ಎಪಿ ಸಿಂಗ್ ಅವರು ಆಪರೇಷನ್ ಸಿಂಧೂರ್ ಸಮಯದಲ್ಲಿ ಇದೇ ಎಸ್ 400 ಏರ್ ಡಿಫೆನ್ಸ್ ವ್ಯವಸ್ಥೆಯನ್ನು ಗೇಮ್ ಚೇಂಜರ್ ಎಂದು ಕರೆದಿದ್ದರು.

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯ ನಂತರ ಮೇ ತಿಂಗಳ ಸಂಘರ್ಷದ ಸಮಯದಲ್ಲಿ ಭಾರತವನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ಹಲವಾರು ಕ್ಷಿಪಣಿಗಳನ್ನು ಹಾರಿಸಿದರೂ ಅವುಗಳು ಗುರಿ ತಲುಪದಂತೆ ಆಗಸದಲ್ಲೇ ಎಸ್ 400 ಹೊಡೆದುರುಳಿಸಿತ್ತು. ಎಸ್ 400 ಅಬೇಧ್ಯ ಕೋಟೆಯೆದುರು ಪಾಕಿಸ್ತಾನದ ಯಾವುದೇ ಕ್ಷಿಪಣಿ ಗುರಿ ತಲುಪಲು ಸಾಧ್ಯವಾಗಲಿಲ್ಲ ಎಂದು ಎಪಿ ಸಿಂಗ್ ಹೇಳಿದ್ದರು.

**ಎಸ್ 400 ವಿಶೇಷತೆ:** ಎಸ್ 400 ಕ್ಷಿಪಣಿ ವ್ಯವಸ್ಥೆಯು 600 ಕಿ.ಮೀ. ವರೆಗಿನ ಶತ್ರು ಚಟುವಟಿಕೆಯನ್ನು ಪತ್ತೆ ಮಾಡುತ್ತದೆ. ಏಕಕಾಲದಲ್ಲಿ 100 ಕ್ಕೂ ಹೆಚ್ಚು ಗುರಿಗಳನ್ನು ಟ್ರ್ಯಾಕ್ ಮಾಡುತ್ತದೆ. 400 ಕಿ.ಮೀ. ವರೆಗಿನ ಗುಂಡಿನ ವ್ಯಾಪ್ತಿಯೊಂದಿಗೆ, ಇದು ಬಾಂಬರ್‌ಗಳು, ಫೈಟರ್ ಜೆಟ್‌ಗಳು, ಡ್ರೋನ್‌ಗಳು, ಮುಂಚಿನ ಎಚ್ಚರಿಕೆ ವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಸಹ ನಾಶಪಡಿಸುತ್ತದೆ. -400 ವ್ಯವಸ್ಥೆಯ ಪ್ರತಿ ಯೊಂದು ರೆಜಿಮೆಂಟ್ ಅಥವಾ ಘಟಕವು 8 ಉಡಾವಣಾ ವಾಹನಗಳನ್ನು ಹೊಂದಿದ್ದು, ಪ್ರತಿಯೊಂದೂ ನಾಲ್ಕು ಕ್ಷಿಪಣಿ ಕೊಳವೆಗಳನ್ನು ಹೊಂದಿರುತ್ತದೆ.

**2018ರ ಒಪ್ಪಂದ**

ಭಾರತವು 2018ರಲ್ಲಿ ರಷ್ಯಾ ದಿಂದ -400 ಅನ್ನು ಖರೀದಿಸಿತು. ರೂ. 39,000 ಕೋಟಿ ಮೌಲ್ಯದ ಒಪ್ಪಂದವು 5 -400 ಟ್ರಯಂಫ್ ಏರ್ ಡಿಫೆನ್ಸ್ ಘಟಕಗಳನ್ನು ಹೊಂದಿತ್ತು.


ಹಾಸನದ ಸ್ಥಾನಿಕ ಜಿಲ್ಲಾಧಿಕಾರಿಗಳ ಭೂ ದಾಖಲೆಗಳ ನಿರ್ದೇಶಕರ ನ್ಯಾಯಾಲಯದಲ್ಲಿ

ಆರ್.ಎ. 179/2025

ಅಪೀಲುದಾರರು : ಸಣ್ಣಯ್ಯ ಬಿನ್ ಮಾಯಿಗಯ್ಯ
ಬಿಟ್ಟಹಳ್ಳಿ ಗ್ರಾಮ, ದುದ್ದ ಹೋಬಳಿ,
ಹಾಸನ ತಾಲ್ಲೂಕು

: : ವಿರುದ್ಧ : :

ರೆಸ್ಪಾಂಡೆಂಟರು : ಆರ್ (2) (ಎ) ದೊಡ್ಡಯ್ಯ ಬಿನ್ ಈರಯ್ಯ
ಆರ್ (2) (ಬಿ) ಜಯರಾಮು ಬಿನ್ ದೊಡ್ಡಯ್ಯ
ಆರ್ (2) (ಸಿ) ದೇವರಾಜ ಬಿನ್ ದೊಡ್ಡಯ್ಯ
ಆರ್ (2) (ಡಿ) ಸುರೇಶ ಬಿನ್ ದೊಡ್ಡಯ್ಯ
ಆರ್ (2) (ಇ) ಅನಂತ ಬಿನ್ ದೊಡ್ಡಯ್ಯ

ವಿಳಾಸ : ಬಿಟ್ಟಹಳ್ಳಿ ಗ್ರಾಮ, ದುದ್ದ ಹೋಬಳಿ, ಹಾಸನ ತಾಲ್ಲೂಕು.

**ಪತ್ರಿಕಾ ಪ್ರಕಟಣೆ**

ಅಪೀಲುದಾರರು ಈ ಮೇಲ್ಕಂಡ ಅಪೀಲನ್ನು ರೆಸ್ಪಾಂಡೆಂಟರ ವಿರುದ್ಧ ಹಾಸನದ ಸ್ಥಾನಿಕ ಜಿಲ್ಲಾಧಿಕಾರಿಗಳ ಭೂ ದಾಖಲೆಗಳ ನಿರ್ದೇಶಕರ ನ್ಯಾಯಾಲಯದಲ್ಲಿ ಹಾಸನ ತಾಲ್ಲೂಕು, ದುದ್ದ ಹೋಬಳಿ, ಬಿಟ್ಟಹಳ್ಳಿ ಗ್ರಾಮದ ಸರ್ವೆ ನಂ: 1 ರಲ್ಲಿ ರಿ ಸರ್ವೆ ನಂ: 1/1.2 ಎಂದು ಮಾಡಿರುವ ಹಿಸ್ಸಾ ಪೋಡಿ ದುರಸ್ತಿ ಆದೇಶವನ್ನು ರದ್ದುಪಡಿಸುವಂತೆ ಕೋರಿ ಮೇಲ್ಮನವಿ ದಾಖಲ್ಮಾಡಿರುತ್ತಾರೆ. ಸದರಿ ಪ್ರಕರಣವು ದಿನಾಂಕ: 04/09/2025 ರಂದು ಮಧ್ಯಾಹ್ನ 3-00 ಗಂಟೆಗೆ ನಿಗಧಿ ಆಗಿದ್ದು ಸದರಿ ಕೇಸಿಗೆ ಉತ್ತರಿಸುವುದಕ್ಕಾಗಿ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಬೇಕೆಂದು ಈ ಮೂಲಕ ನಿಮಗೆ ಸಮನ್ಸ್ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಗೊತ್ತುಪಡಿಸಲಾದ ದಿನದಂದು ಕೇಸಿನ ಅಂತಿಮ ವಿಲೇಗಾಗಿ ಗೊತ್ತುಪಡಿಸಲಾಗಿರುವುದರಿಂದ ಆ ದಿನದಂದು ನಿಮ್ಮ ಪ್ರತಿವಾದ ಸಮರ್ಥನೆಗಾಗಿ ಅದಕ್ಕೆ ಸಂಬಂಧಪಟ್ಟ ದಾಸ್ತವೇಜು ಮತ್ತು ಸಾಕ್ಷಿದಾರರ ಸಾಕ್ಷವನ್ನು ಹಾಜರುಪಡಿಸಲು ಸಿದ್ಧರಿರತಕ್ಕದ್ದು.

ದಿನಾಂಕ: 02/09/2025 ರಂದು ಸಹಿ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಅರ್ಜಿದಾರರ ಪರ ವಕೀಲರು
ಡೀಲಾಕ್ಷಕುಮಾರ್ ಬಿ.ಹೆಚ್., ವಕೀಲರು
ಶ್ರೀ ಅನ್ನಪೂರ್ಣೇಶ್ವರಿ ಕಾಂಪ್ಲೆಕ್ಸ್
ಭೀಮಯ್ಯ ಕಾಲೋನಿ, ಹಾಸನ.

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು
ಹಾಗೂ ಪದನಿಮಿತ್ತ ಭೂ ದಾಖಲೆಗಳ
ಉಪ ನಿರ್ದೇಶಕರು
ಹಾಸನ ಜಿಲ್ಲೆ, ಹಾಸನ.

